بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَکُمُ اللّٰہُ بِبَدْرٍ وَّاَنْتُمْ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 01

ಸಂಚಿಕೆ: 24

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

25 ಜೂನ್ 2020, 25 ಎಹ್‌ಸಾನ್ 1399 ಹಿಜರಿ ಶಮ್ಸಿ,
03 ಝುಲ್-ಖಅದಃ 1441 ಹಿಜರಿ ಖಮರಿ.


**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰھُمَّ اَیِّدْ اِمَامَنَا بِرُوْحِ الْقُدُسِ وَبَارِکْ لَنَا فِیْ عُمُرِہٖ وَاَمْرِہٖ

**ಅಲ್ಲಾಹನ ಉಪದೇಶ**

وَمَنْ یُّطِعِ اللّٰہَ وَرَسُوْلَہٗ یُدْخِلْہُ جَنّٰتٍ تَجْرِیْ مِنْ تَحْتِھَا الْاَنْھٰرُ خٰلِدِیْنَ فِیْھَا ؕ وَذٰلِکَ الْفَوْزُ الْعَظِیْمُ ○

*(ಅನ್ನಿಸಾಅ್:14)*

ಅಂದರೆ: ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕನನ್ನು ಅನುಸರಿಸುವವರಿಗೆ, ಕೆಳಭಾಗದಲ್ಲಿ ಹೊಳೆಗಳು ಹರಿಯುವ ಸ್ವರ್ಗೀಯ ತೋಟಗಳಲ್ಲಿ ಅವನು ಪ್ರವೇಶ ನೀಡುವನು.ಅವರು ಅಲ್ಲೇ ನಿತ್ಯ ವಾಸಿಸುವರು.ಅದೇ ಮಹತ್ತರ ವಿಜಯ.

**ಅಲ್ಲಾಹನ ಹೊರತಾದ ಪ್ರೀತಿಯು ಪಾಪಗಳಿಗೆ ಕಾರಣವಾಗುತ್ತದೆ. ಅದು ನಿಧಾನವಾಗಿ ತನ್ನ ಪ್ರಭುತ್ವ ಸ್ಥಾಪಿಸುತ್ತದೆ.**

**ಪಾಪಗಳಿಂದ ದೂರವಿರಲು ಮತ್ತು ರಕ್ಷಿಸಲ್ಪಡಲು ಒಂದು ವಿಧಾನ ಎಂದರೆ ಮನುಷ್ಯನು ಮರಣವನ್ನು ನೆನಪಿಡಬೇಕು ಮತ್ತು ಅಲ್ಲಾಹನ ಮೂಲಕ ದೈವಿಕ ಪ್ರೀತಿ ಮತ್ತು ವಿಶ್ವಾಸ (ಈಮಾನ್) ವೃದ್ಧಿಸುತ್ತದೆ. ಅಲ್ಲಾಹನ ಪ್ರೀತಿ ಮನದಲ್ಲಿ ಹುಟ್ಟಿದರೆ ಅದು ಸ್ವಯಂ ಪಾಪಗಳನ್ನು ದರ್ಷಣಗೊಳಿಸುತ್ತದೆ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

**ಪಾಪಗಳ ವಾಸ್ತವ ಮತ್ತು ಅದರಿಂದ ರಕ್ಷಣೆಪಡುವ ಮಾರ್ಗಗಳು**

ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸ ಬಯಸುತ್ತೇನೆ. ಅದೇನೆಂದರೆ ಪಾಪಗಳು ಹೇಗೆ ಹುಟ್ಟುತ್ತವೆ? ಅದರ ಉತ್ತರ ಸಾಧಾರಣ ಪದಗಳಲ್ಲಿ ಹೇಳಬೇಕಾದರೆ ಅಲ್ಲಾಹನಿಗೆ ಹೊರತಾದ ಪ್ರೇಮ ಮಾನವನ ಹೃದಯದ ಮೇಲೆ ಅಚ್ಚಾದರೆ ಅದು ಸ್ವಚ್ಚವಾದ ಕನ್ನಡಿಯ ಮೇಲೆ ಒಂದು ರೀತಿಯ ಧೂಳು ಹಾಕಿದ ಹಾಗೆ, ಅದರ ಪರಿಣಾಮವಾಗಿ ಅದು ನಿಧಾನವಾಗಿ ಕತ್ತಲೆ ಉಂಟು ಮಾಡುತ್ತದೆ. ಪ್ರತ್ಯೇಕತೆ ಭಾವ ಉಂಟಾಗಿ ಅಲ್ಲಾಹನಿಂದ ದೂರಮಾಡುತ್ತದೆ. ಇದುವೇ ಬಹುದೇವಾರಾಧನೆಯ ಬೇರಾಗಿದೆ. ಆದರೆ ಹೃದಯದಲ್ಲಿ ಅಲ್ಲಾಹನ ಪ್ರೇಮ ಮಾತ್ರ ಆವರಿಸಿಕೊಂಡರೆ ಅದು ಪ್ರತ್ಯೇಕತೆಯನ್ನು ದೂರ ಮಾಡಿ ಕೇವಲ ತನಗಾಗಿ ಆಯ್ಕೆ ಮಾಡಿಕೊಳ್ಳುತ್ತಾನೆ. ಮತ್ತು ಅದರ ಮೇಲೆ ಸ್ಥಿರತೆ ಉಂಟಾಗುತ್ತದೆ. ಹೀಗೆ ಅದು ವಾಸ್ತವ ಸ್ಥಾನಕ್ಕೆ ತಲುಪಿರುತ್ತದೆ.ಒಂದು ಅಂಗ ಮುರಿದು ಹೋದರೆ ಅದನ್ನು ಸರಿಪಡಿಸಿದಾಗ, ಇದು ನೋವನ್ನು ಉಂಟುಮಾಡುತ್ತದೆ. ಆದರೆ ಮುರಿದು ಹೋಗಿರುವ ಅಂಗವು ಅದನ್ನು ಸರಿಪಡಿಸುವಲ್ಲಿ ಅನುಭವಿಸಿದ ತಾತ್ಕಾಲಿಕ ನೋವುಗಿಂತ ಹೆಚ್ಚು ನೋವನ್ನುಂಟು ಮಾಡುತ್ತದೆ. ಅದರ ನಂತರ ಆತನಿಗೆ ನೆಮ್ಮದಿ ಉಂಟಾಗುತ್ತ. ಆದರೆ ಆ ಮುರಿದು ಹೋಗಿರುವ ಅಂಗವನ್ನು ಹಾಗೆಯೇ ಬಿಟ್ಟರೆ ಅದನ್ನು ಸಂಪೂರ್ಣವಾಗಿ ಕತ್ತರಿಸಬೇಕಾದ ಸಮಯ ಬರುತ್ತದೆ. ಅದೇ ರೀತಿ, ಅಚಲವಾದ ಸ್ಥಿರತೆಯನ್ನು ಸಾಧಿಸುವ ಸಲುವಾಗಿ, ಆರಂಭದಲ್ಲಿ ಪ್ರಾಥಮಿಕ ಹಂತಗಳಲ್ಲಿ ಒಬ್ಬ ವ್ಯಕ್ತಿಯ ಉದ್ವೇಗದ ನೋವನ್ನು ಅನುಭವಿಸುತ್ತಾನೆ ಮತ್ತು ತೊಂದರೆಗಳನ್ನು ಎದುರಿಸುತ್ತಾನೆ, ಆದರೆ ಸ್ಥಿರತೆ ಸಾಧಿಸಿದಾಗ, ಶಾಶ್ವತವಾದ ಪರಿಹಾರ ಮತ್ತು ಸಂತೋಷ ಹುಟ್ಟುತ್ತದೆ. ರಸೂಲುಲ್ಲಾಹ್(ಸ) ರವರಿಗೆ ಈ ನಿರ್ದೇಶನ ದೊರೆತಾಗ **"ಫಸ್ತಖಿಮ್ ಕಮಾ ಉಯಿರ್‌ತ'** (ಹೂದಾ-113) ಬರೆಯಲಾಗಿದೆ. ಅವರಲ್ಲಿ ಯಾವುದೇ ಬಿಳಿ ಕೂದಲು ಇರಲಿಲ್ಲ ಆದರೆ ಬಿಳಿ ಕೂದಲು ಬರಲಾರಂಭಿಸಿದಾಗ ಅವರು ಹೇಳಿದರು. ಹೂದ್ ಅಧ್ಯಾಯವು ನನ್ನನ್ನು ವೃದ್ಧನನ್ನಾಗಿ ಮಾಡಿದೆ.

ತಾತ್ಪರ್ಯವೇನೆಂದರೆ ಎಲ್ಲಿಯವರೆಗೆ ಮನುಷ್ಯನು ತನ್ನ ಮೃತ್ಯುವಿನ ಬಗ್ಗೆ ನೆನೆಯುವುದಿಲ್ಲವೋ ಸತ್ಯದೆಡೆಗೆ ವಾಲುವುದಿಲ್ಲ. ಪಾಪವು ಅಲ್ಲಾಹನ ಹೊರತು ಇನ್ನಿತರರನ್ನು ಪ್ರೀತಿಸಿದ ಕಾರಣದಿಂದ ಉಂಟಾಗುತ್ತದೆ ಮತ್ತು ಅದು ನಿಧಾನವಾಗಿ ತನ್ನ ಪ್ರಭುತ್ವವನ್ನು ಸ್ಥಾಪಿಸುತ್ತದೆ. ಆದುದರಿಂದ ಪಾಪಗಳಿಂದ ದೂರವಿರಲು ಮತ್ತು ರಕ್ಷಣೆ ಪಡೆಯಲು ಬೇಕಾದ ಒಂದು ವಿಷಯವೇನೆಂದರೆ ಮನುಷ್ಯನು ತನ್ನ ಮರಣವನ್ನು ನೆನೆಸಬೇಕು ಮತ್ತು ಅಲ್ಲಾಹನ ಶಕ್ತಿ ಸಾಮಾರ್ಥ್ಯಗಳ ಕುರಿತು ಚಿಂತಿಸಬೇಕು. ಏಕೆಂದರೆ ಅದರಿಂದ ದೈವಿಕ ಪ್ರೀತಿ ಮತ್ತು ವಿಶ್ವಾಸ (ಈಮಾನ್) ವೃದ್ಧಿಯಾಗುತ್ತದೆ. ಅಲ್ಲಾಹನ ಪ್ರೇಮ ಮನದಲ್ಲಿ ಉಂಟಾದರೆ ಅದು ಸ್ವಯಂ ಪಾಪಗಳನ್ನು ಭಸ್ಮಗೊಳಿಸುತ್ತದೆ.

ಪಾಪಗಳಿಂದ ರಕ್ಷಣೆ ಪಡೆಯುವ ದ್ವಿತೀಯ ಮಾರ್ಗವೆಂದರೆ **"ಮರಣ"** ವಾಗಿದೆ. ಮನುಷ್ಯನು ತನ್ನ ಮರಣವನ್ನು ಮುಂದೆ ಅಲಕ್ಷಿಸಿದರೆ ಅವನು ದುಷ್ಕರ್ಮಗಳಿಂದ ಮತ್ತು ಅನಾಹುತಗಳಿಂದ ಉಳಿಯಬಹುದಾಗಿದೆ. ಮತ್ತು ಅಲ್ಲಾಹನ ಮೇಲೆ ಒಂದು ಹೊಸ ರೀತಿಯ ವಿಶ್ವಾಸ ಪಡೆಯಬಹುದಾಗಿದೆ. ಆ ಮೂಲಕ ಪಾಪಗಳಿಂದ ಪಶ್ಚಾತ್ತಾಪ ಮತ್ತು ಕ್ಷಮಾಪಣೆಯ ಭಾವ ಉಂಟಾಗುತ್ತದೆ. ಮನುಷ್ಯನ ಅಸ್ತಿತ್ವದ ಬುನಾದಿ ಏನು? ಒಂದು ಶ್ವಾಸದ ಮೇಲೆ ಅವಲಂಬಿತವಾಗಿದೆ. ಹೀಗಿರುವಾಗ ಅವನು ಅಂತ್ಯದ ದಿನದ ಬಗ್ಗೆ ಏಕೆ ಚಿಂತಿಸುವುದಿಲ್ಲ ಮತ್ತು ಮರಣದ ಬಗ್ಗೆ ಏಕೆ ಹೆದರುವುದಿಲ್ಲ ಮತ್ತು ತನ್ನ ಇಷ್ಟಾರ್ಥಗಳ ಮೋಹಕ್ಕೆ ಬಲಿಯಾಗಿ ಪಾಶವಿಕ ರೀತಿಯಲ್ಲಿ ತನ್ನ ವಯಸ್ಸನ್ನು ವ್ಯರ್ಥಗೊಳಿಸುತ್ತಾನೆ. ಹಿಂದೂಗಳೂ ಮರಣ ಹೆದರಿಕೆ ಹೊಂದಿದ್ದನ್ನು ನಾನು ಕಂಡಿದ್ದೇನೆ. ಬಟಾಲದಲ್ಲಿ ಕಿಶನ್ ಚಂದ್ ಹೆಸರಿನ ಒಬ್ಬ ಭಂಡಾರಿ ಎಪ್ಪತ್ತು ಅಥವಾ ಎಪ್ಪತ್ತೆರಡು ವಯಸ್ಸಿನವನಿದ್ದನು. ಆ ಸಮಯ ಅವನು ತನ್ನ ಮನೆಮಠವೆಲ್ಲವನ್ನು ತ್ಯಜಿಸಿ ಕಾಶಿಗೆ ಹೋಗಿ ವಾಸಿಸಿದನು ಮತ್ತು ಅಲ್ಲೇ ಮರಣಹೊಂದಿದನು. ಇದು ಕೇವಲ ಅವನ ಮೋಕ್ಷ ಭಾವನೆಯಿಂದಾಗಿತ್ತು. ಆದರೆ ಅವನ ಭಾವನೆ ಮಿಥ್ಯವಾಗಿತ್ತು. ಆದರೆ ನಾವು ಇದರಿಂದ ಇಷ್ಟಾದರು ಸಕಾರಾತ್ಮಕವಾಗಿ ಪಾಠ ಕಲಿಯಬಹುದಾಗಿದೆ. ಆತನು ತನ್ನ ಮರಣದ ಬಗ್ಗೆ ಚಿಂತಿಸಿದನು. ಮರಣದ ಚಿಂತೆಯು ಮನುಷ್ಯನನ್ನು ಇಹಲೋಕದ ಮೋಹದಿಂದ ರಕ್ಷಿಸುವುದಲ್ಲದೆ. ಅಲ್ಲಾಹನಿಂದ ದೂರವಾಗುವುದರಿಂದಲೂ ರಕ್ಷಿಸುತ್ತದೆ. ಕಾಶಿಯಲ್ಲಿ ಮರಣ ಹೊಂದಿದರೆ ಮೋಕ್ಷ ಹೊಂದಬಹುದು ಎಂಬ ಸೃಷ್ಟಿ ಆರಾಧನೆಯ ಮೋಹ ಅವನ ಹೃದಯದ ಮೇಲೆ ಬಿದ್ದಿತ್ತು. ಆದರೆ ಮುಸ್ಲಿಮರಾದವರು ಹಿಂದುಗಳಿಗೆ ಇದ್ದಷ್ಟು ಮರಣದ ಕುರಿತು ಚಿಂತಿಸುವುದಿಲ್ಲ ಎಂದು ನೋಡಿ ನನಗೆ ತುಂಬ ಖೇದವಾಗುತ್ತಿದೆ. ರಸೂಲುಲ್ಲಾಹ್(ಸ) ರವರನ್ನು ನೋಡಿ ಕೇವಲ ಒಂದು ಆದೇಶ **"ಫಸ್ತಖಿಮ್ ಕಮಾ ಉಮಿರ್‌ತ"** (ಹೂದ್:113)ವೇ ಅವರನ್ನು ವೃದ್ಧನನ್ನಾಗಿಸಿದೆ. ಎಷ್ಟೊಂದು ಅವರಲ್ಲಿ ಮೃತ್ಯುವಿನ ಕುರಿತು ಚಿಂತೆ ಇತ್ತು. ನಿಮ್ಮ ಸ್ಥಿತಿ ಹೀಗೇಕೆ, ಅದರಿಂದ ನವು ಪಾಠ ಕಲಿಯಬೇಕಾಗಿದೆ ಇಲ್ಲವಾದರೆ ರಸೂಲುಲ್ಲಾಹ್(ಸ) ರವರ ಪವಿತ್ರ ಜೀವನ ಮಾನವರಿಗೆ ದೊಡ್ಡ ಪ್ರೇರಣೆಯಾಗಿದೆ. ಅಲ್ಲಾಹನು ಅವರಿಗೆ ಅಂತ್ಯ ದಿನದವರೆಗೆ ಸರ್ವಲೋಕಗಳಿಗಾಗಿ ಪರಿಪೂರ್ಣ ಮಾರ್ಗದರ್ಶಕನನ್ನಾಗಿ ನಿಯೋಜಿಸಿದ್ದಾನೆ. ಆದರೂ ಅವರ(ಸ) ಜೀವನದ ಎಲ್ಲಾ ಘಟನೆಗಳು ಕ್ರಿಯಾತ್ಮಕ ಶಿಕ್ಷಣದ ಭಂಡಾರವಾಗಿದೆ. ಯಾವ ರೀತಿ ಪವಿತ್ರ ಖುರ್‌ಆನ್ ಅಲ್ಲಾಹನ ಮೂಲ ಗ್ರಂಥ ಹಾಗೂ ದೈವಿಕ ನಿಯಮಗಳ ಗ್ರಂಥವಾಗಿದೆಯೋ. ಅದೇ ರೀತಿಯಲ್ಲಿ ರಸೂಲುಲ್ಲಾಹ್(ಸ) ರವರ ಜೀವನವು ಒಂದು ಕ್ರಿಯಾತ್ಮಕ ಗ್ರಂಥವಾಗಿದೆ. ಬೇರೆ ಅರ್ಥದಲ್ಲಿ ಅದು ಪವಿತ್ರ ಖುರ್‌ಆನಿನ ವ್ಯಾಖ್ಯಾನ ಹಾಗೂ

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**"ಕಾಲಘಟ್ಟದ ಖಲೀಫ ಹಾಗೂ ಜಮಾಅತ್ ಒಂದೇ ಅಂಗದ ಎರಡು ಹೆಸರಾಗಿದೆ."**

**ಈಗ ನಾವು ಎಂತಹ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದೇವೆಂದರೆ ಅಲ್ಲಾಹನ ಮುಂದೆ ವಿಶಿಷ್ಟವಾಗಿ ಬಾಗಿ ಪ್ರಾರ್ಥಿಸುವ ಆವಶ್ಯಕತೆ ಇದೆ.**

**ಈ ಕಾಲಘಟ್ಟದಲ್ಲಿ ಸಂಭವಿಸುತ್ತಿರುವ ವಿಕೋಪಗಳ ಬಗ್ಗೆ ತಿಳಿಸುತ್ತಾ ಇದ್ದೇನೆ ಇದರ ನೇರ ಸಂಬಂಧವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರಿಂದ ಇದೆ. ಆದ್ದರಿಂದ ನಾವು ನಮ್ಮ ಈಮಾನಿನ ದೃಢತ್ವ ಹಾಗೂ ನಮ್ಮ ಅಂತ್ಯವು ಉತ್ತಮವಾಗುವುದಕ್ಕೆ ದುಆ ಮಾಡುತ್ತಿರಬೇಕು. ಮತ್ತು ಲೋಕದ ಸಂರಕ್ಷಣೆಗಾಗಿಯು ಪ್ರಾರ್ಥಿಸುತ್ತಾ ಇರಬೇಕು.**

**ಪ್ರಸ್ತುತುತ ಪರಿಸ್ಥಿತಿಯಲ್ಲಿ ಜಮಾಅತಿನ ಅಭಿವೃದ್ಧಿಗೋಸ್ಕರ ಮತ್ತು ಆರ್ಥಿಕ ಬಲಿದಾನ ನೀಡುವವರಿಗೋಸ್ಕರ....... ಎಂ.ಟಿ.ಎ ವಿನ ಉದ್ಯೋಗಿಗಳಿಗೋಸ್ಕರ, ಇಸ್ಲಾಮೀ ಲೋಕಕ್ಕೋಸ್ಕರ ಸಹ ಅವರ ಪರಸ್ಪರ ಜಗಳಗಳು ಕೊನೆಗೊಳ್ಳಲಿ. ಅವರು ಶಾಂತಿಯಿಂದ ಜೀವಿಸಲು ಕಲಿಯುವಂತಾಗಲಿ ಎಂದು ದುಆವಿನ ಕೋರಿಕೆ.**

**ಕೆಲವು ದುಆಗಳನ್ನು ಯಾವಾಗಲು ಮಾಡುತ್ತಿರಲು ಉಪದೇಶ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–05–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ
اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔
اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಮೊದಲನೆಯದಾಗಿ ನಾನು ಎಲ್ಲಾ ಅಹ್ಮದಿಯರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಕೆಲವು ದಿನಗಳ ಹಿಂದೆ ನನಗೆ ಗಾಯವಾದಾಗ ಅವರು ತಮ್ಮ ಭಾವನೆಗಳನ್ನು ಅಸಾಧಾರಣವಾಗಿ ಪ್ರಕಟಿಸಿದರು ಮತ್ತು ಬಹಳ ಬೇಗುದಿಯಿಂದ ದುಆ ಮಾಡಿದರು. ಅಲ್ಲಾಹನು ನಮಗೆಲ್ಲರಿಗೂ ಅತ್ಯುತ್ತಮ ಪ್ರತಿಫಲ ನೀಡಲಿ. ನಿಮ್ಮ ಪ್ರಾಮಾಣಿಕತೆಯನ್ನೂ ನಿಷ್ಠೆಯನ್ನೂ ವರ್ಧಿಸುವವನಾಗಲಿ. ಈ ಕಾಲದಲ್ಲಿ ಅಲ್ಲಾಹನಿಗೋಸ್ಕರ ಮತ್ತು ಅಲ್ಲಾಹನ ಆಜ್ಞೆ ಪ್ರಕಾರ ಪರಸ್ಪರ ಪ್ರೀತಿ, ವಿಶಿಷ್ಟವಾಗಿ ಆಯಾ ಕಾಲದ ಖಲೀಫರೊಂದಿಗೆ ಪ್ರಾಮಾಣಿಕ ನಿಷ್ಠೆ ಪ್ರಕಟಿಸುವ ಉದಾಹರಣೆ ಅಹ್ಮದಿಯಾ ಜಮಾಅತ್‌ನಲ್ಲಿ ಮಾತ್ರ ಕಾಣಲು ಸಿಗುತ್ತದೆ. ಈ ದ್ವಿಮುಖ ಪ್ರೀತಿ ಸಹ ಅಲ್ಲಾಹನೇ ಸೃಷ್ಟಿಸಿದ್ದಾಗಿದೆ. ಇವರಲ್ಲಿ ಯಾರು ಒಬ್ಬರಿನ್ನೊಬ್ಬರ ಬಗ್ಗೆ ಹೆಚ್ಚು ಪ್ರೀತಿ ಹೊಂದಿದ್ದಾರೆ ಎಂದು ತಿಳಿಯುವುದಿಲ್ಲ. ಕೆಲವೊಮ್ಮೆ ಹೇಗೆ ಕಾಣುತ್ತದೆ ಎಂದರೆ ಅಹ್ಮದಿ ಸದಸ್ಯರ ಖಲೀಫರೊಂದಿಗೆ ಪ್ರೀತಿ ಬಹಳ ಹೆಚ್ಚಾಗಿದೆ ಎಂದು ಭಾಸವಾಗುತ್ತದೆ ಮತ್ತು ಈ ಕಾಲಘಟ್ಟದ ಖಲೀಫರ ಪ್ರೀತಿ ಮತ್ತು ಸಂಬಂಧ ಸದಸ್ಯರೊಂದಿಗಿದೆ. ಒಟ್ಟಾರೆ ಹೇಳುವುದಾದರೆ ಇದು ಎಂತಹ ಸಂಬಂಧವಾಗಿದೆ ಎಂದರೆ ಅಂತಹ ಯಾವುದೇ ಉದಾಹರಣೆ ಲೌಕಿಕ ಸಂಬಂಧಗಳಲ್ಲಿ ಕಾಣಲು ಸಿಗುವುದಿಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ರವರ ಈ ವಾಕ್ಯವು ನನಗೆ ಬಹಳ ಇಷ್ಟವಾಗುತ್ತದೆ: "ಕಾಲಘಟ್ಟದ ಖಲೀಫ ಹಾಗೂ ಜಮಾಅತ್ ಒಂದೇ ಅಂಗದ ಎರಡು ಹೆಸರಾಗಿದೆ." (ಖುತ್‌ಬಾತೆ ನಾಸಿರ್, ಸಂಪುಟ–4, ಪುಟ–423, ಖುತ್‌ಬ ಜುಮುಅ 29–12–1972)

ಇದು ನಿಮ್ಮೆಲ್ಲರ ಸ್ವೀಕೃತವಾದ ದುಆಗಳ ಪ್ರತಿಫಲವಾಗಿದೆ ಅಲ್ಲಾಹನ ಅನುಗ್ರಹದಿಂದ ಅಸಮಾನ್ಯವಾಗಿ ಗಾಯಗಳು ಬಹು ಬೇಗ ಗುಣವಾಗಿದೆ. ವೈದ್ಯರು ನನಗೆ ತಿಳಿಸಿದರು ಚಹರೆಯ ಗಾಯಗಳು ಸಾಮಾನ್ಯವಾಗಿ ವಾಸಿಯಾಗುತ್ತದೆ ಆದರೆ ವೈದ್ಯರು ಹೇಳುತ್ತಾರೆ ಇದು ಇಷ್ಟು ಬೇಗ ವಾಸಿಯಾಗುತ್ತದೆ ಎಂದು ನಾವು ಊಹಿಸಿರಲಿಲ್ಲ. ಅವರಿಗೆ ನಾನು ಹೇಳಿದೆ ಚಿಕಿತ್ಸೆಯು ಒಂದು ಕಡೆಯಾಗಿದೆ ಆದರೆ ಮೂಲ ವಸ್ತು ಅಹ್ಮದಿ ಸದಸ್ಯರು ಮಾಡುತ್ತಿರುವ ದುಆ ಆಗಿದೆ. ನನಗೂ ಹಾಗೆಯೇ ಅನಸುತ್ತಿತ್ತು ಕೆಲವು ಗಾಯಗಳು ವಾಸಿ ಆಗಲು ಸುಮಾರು ಎರಡು ವಾರಗಳ ಕಾಲವಾದರೂ ಆಗಬಹುದು ಮತ್ತೆ ಆ ಗಾಯಗಳ ಕುರುಹುಗಳು ಕಾಣಿಸಬಹುದು ಎಂದು ಆದರೆ ಅಲ್ಲಾಹನ ಅನುಗ್ರಹದಿಂದ ಏಳು, ಎಂಟು ದಿವಸಗಳಲ್ಲಿಯೇ ಎಲ್ಲಾ ಗಾಯಗಳು ವಾಸಿಯಾಯಿತು. ಈ ಗಾಯದ ಕಾರಣದಿಂದ ನನಗೆ ಲಭಿಸಿದ ಅನುಭವ ಜ್ಞಾನದ ಬಗ್ಗೆ ನಮಗೆ ತಿಳಿಸುತ್ತೇನೆ. ನಾನು ಮರ್‌ಹಮೇ ಈಸಾ ಎಂಬ ಲೇಪನ ಬಳಸಿದೆನು. ಕೆಲ ಕಾಲ ಮುಂಚೆ ಮೀರ್ ಮಹ್ಮೂದ್ ನಾಸಿರ್ ಸಾಹೆಬರು ಸಿರ್ಯಾನಿ ಮದ್ದಿನ ಪ್ರಕಾರ ನನಗೆ ಸಿದ್ಧ ಮಾಡಿ ಕಳುಹಿಸಿದ್ದರು. ಅದನ್ನು ನಾನು ಉಪಯೋಗಿಸಿದೆ. ಅದೇ ರೀತಿ ಹೋಮಿಯೋಪಥಿಕ್ ಕ್ರೀಮ್ ಕೆಲಂಡುಲಾ ಸಹ ಲೇಪಿಸಿದೆನು. ನೈಜ ಅನುಗ್ರಹ ನೀಡಿದುದು ಅಲ್ಲಾಹನೇ. ಅವನೇ ರೋಗ ಶಮನ ನೀಡುವವನಾಗಿದ್ದಾನೆ. ಔಷಧಿಗಳ ಬಗ್ಗೆ ನಾನು ಪ್ರಸ್ತಾಪಿಸಿರುವ ಕಾರಣ ಅನ್ಯರಿಗೂ ಇದರಿಂದ ಉಪಯೋಗವಾಗಲಿ ಎಂದಾಗಿದೆ. ಕೆಲವರಿಗೆ ಇದರ ಅವಶ್ಯಕತೆಯು ಇರುತ್ತದೆ. ಏನೇ ಇರಲಿ ನೀವು ಈಗ ದುಆ ಮಾಡಿರಿ. ಗಾಯದ ಕಾರಣದಿಂದ ಸಂಭವಿಸಿದ ಉಳಿದ ತೊಂದರೆಗಳನ್ನು ಸಹ ಅಲ್ಲಾಹನು ಬೇಗನೆ ದೂರ ಸರಿಸುವವನಾಗಲಿ.

ಅಲ್ಲಾಹನ ಅನುಗ್ರಹವೇ ನಿಜವಾದ ಶಕ್ತಿ ಆಗಿದೆ ಅದು ದುಆಗಳ ಮುಖಾಂತರ ಪಡೆಯಬಹುದು. ನನಗೆ ನೆನಪಿದೆ ಕೆಲ ಕಾಲ ಮುಂಚೆ ನನ್ನ ಭುಜ ಹಾಗೂ ತೋಳುಗಳಲ್ಲಿ ಬಹಳ ನೋವಿತ್ತು. ಕೈ ಎತ್ತಲೂ ಕಷ್ಟವಾಗುತ್ತಿತ್ತು. ಇನ್ನೊಂದು ಕೈಯ ಸಹಾಯ ತೆಗೆದುಕೊಳ್ಳ ಬೇಕಾಗುತ್ತಿತ್ತು. ಇಲ್ಲಿನ ಒಂದು ತಜ್ಞರ ಬಳಿ ಪರಿಶೀಲಿಸಿದಾಗ ಅವರು ಹೇಳಿದರು ಈ ನೋವು ಸುಮಾರು ಆರು ವಾರದಿಂದ ನಾಲ್ಕು ತಿಂಗಳವರೆಗೂ ಇರುವುದು ಎಂದಿದ್ದರು. ಅವರು ಮತ್ತೆ ಕೆಲವು ದಿನಗಳ ನಂತರ ಮತ್ತೆ ಪರಿಶೀಲಿಸಿದಾಗ ಶೇ. 90 ರಷ್ಟು ನೋವು ಕಡಿಮೆ ಆಗಿತ್ತು. ಅದಕ್ಕೆ ಆ ತಜ್ಞರು ಬಹಳ ಆಶ್ಚರ್ಯಗೊಂಡರು. ಆಗ ನಾನು ಅವರಿಗೆ ತಿಳಿಸಿದೆ ಲಕ್ಷಾಂತ ಜನರು ನನ್ನ ಆರೋಗ್ಯಕ್ಕಾಗಿ ದುಆ ಮಾಡುತ್ತಿರುವಾಗ ಅಲ್ಲಾಹನು ಅನುಗ್ರಹಿಸುತ್ತಾನೆ ಎಂದು. ಆತನು ಆಂಗ್ಲಿಕನಾಗಿದ್ದನು ಆತನು ಹೀಗೆ ಹೇಳಿದನು: ನಾನು ಕ್ರೈಸ್ತ ಮತಕ್ಕೆ ಸೇರಿದ್ದೇನೆ ಮತ್ತು ನನ್ನ ಇಡೀ ಕುಟುಂಬವೂ ಧಾರ್ಮಿಕ ಕುಟುಂಬವಾಗಿದೆ. ದುಆಗಳ ಮೇಲೆ ನನಗೂ ನಂಬಿಕೆ ಇದೆ. ನಿಸ್ಸಂದೇಹವಾಗಿಯು ಇದೂ ಸಹ ದುಆಗಳ ಪ್ರತಿಫಲವಾಗಿದೆ.

ಹೀಗಾಗಿ ಅಲ್ಲಾನ ಅನುಗ್ರಹವೇ ಆಗಿದೆ ನಾವು ಅಲ್ಲಾಹನಂದ ಯಾಚಿಸುತ್ತಿರಬೇಕು. ಅಲ್ಲಾಹನ ಮುಂದೆ ಬಾಗಬೇಕು. ಈಗ ನಾವು ಎಂತ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದೇವೆಂದರೆ ಅಲ್ಲಾಹನ ಮುಂದೆ ವಿಶಿಷ್ಟವಾಗಿ ಬಾಗಿ ಪ್ರಾರ್ಥಿಸುವ ಆವಶ್ಯಕತೆ ಇದೆ. ಯು.ಕೆ ನಿಂದ ಮತ್ತು ಇನ್ನಿತರ ರಾಷ್ಟ್ರಗಳಿಂದಲೂ ವರದಿಗಳು ಬರುತ್ತಾ ಇದೆ ಇಂದಿನ ಪರಿಸ್ಥಿತಿಯಲ್ಲಿ ಅಲ್ಲಾಹನ ಕಡೆಗೆ ಬಾಗುವ ಬಗ್ಗೆ ಜಮಾಅತಿನ ಜನರಿಗೆ ವಿಶಿಷ್ಟ ಶ್ರದ್ಧೆ ಉಂಟಾಗಿದೆ. ಲಾಕ್ ಡೌನಿನ ಈ

ಕಾರಣದಿಂದ ಮನೆಗಳಲ್ಲಿ ವಿಶೇಷವಾಗಿ ಮನೆಗಳಲ್ಲಿ ಬಾ ಜಮಾಅತ್ ನಮಾಝ್ ನಿರ್ವಹಿಸುವ ಕಡೆ ಗಮನ ಆಗಿದೆ. ಯಾವುದಾದರು ಪುಸ್ತಕ, ಹದೀಸ್, ಪವಿತ್ರ ಖುರ್‌ಆನಿನ ದರ್ಸ್‌ಗಳು ನೀಡಲಾಗುತ್ತಿದೆ ಇದರಿಂದ ಹಿರಿಯರ ಜ್ಞಾನವೂ ವರ್ಧಿಸುತ್ತಾ ಇದೆ ಮತ್ತು ಕಿರಿಯರ ಧಾರ್ಮಿಕ ಜ್ಞಾನವೂ ವರ್ಧಿಸುತ್ತಾ ಇದೆ. ಅಲ್ಲಾಹನ ಬಗ್ಗೆ ಇರುವ ಈಮಾನ್ ವರ್ಧಿಸುತ್ತಾ ಇದೆ. ಅಲ್ಲಾಹನ ಅನುಗ್ರಹದಿಂದ ರಮಝಾನ್ ಸಹ ಬಂತು. ಈ ರಮಝಾನ್ ಕಾಲದಲ್ಲಿ ಜನರಲ್ಲಿ ಇಬಾದತ್‌ಗಳ ಬಗ್ಗೆ ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಶ್ರದ್ಧೆ ವರ್ಧಿಸಿತು. ರಮಝಾನ್ ಮುಗಿಯುತ್ತಾ ಇದೆ ಮತ್ತು ಲಾಕ್‌ಡೌನ್‌ನಲ್ಲೂ ಸ್ವಲ್ಪ ಮಟ್ಟಿಗೆ ಮೃದುಗೊಳಿಸಲಾಗುತ್ತಿದೆ. ಆದರೆ ಪ್ರತಿಯೊಬ್ಬ ಅಹ್ಮದಿ ತನ್ನ ಮುಂದೆ ಇರಿಸಿಕೊಳ್ಳಬೇಕಾದ ಎಲ್ಲದಕ್ಕಿಂತಲೂ ದೊಡ್ಡದಾದ ಮತ್ತು ಮಹತ್ವಪೂರ್ಣ ವಿಷಯವೇನೆಂದರೆ ಅವರಿಗೆ ತಮ್ಮ ಕೆಲಸಗಳನ್ನು ಮಾಡಲು ಅನುಮತಿ ದೊರೆತಿರುವುದು. ಮನೆಗಳಿಂದ ಹೊರಗೆ ಹೋಗಿ ಕಾರ್ಯನಿರತರಾಗುವ ಬಗ್ಗೆ ಇರುವ ನಿಯಂತ್ರಣಗಳಲ್ಲಿ ರಿಯಾಯಿತಿಯಾಗಿದೆ. ರಮಝಾನ್ ತಿಂಗಳು ದಾಟಿ ಹೋದುದು ಯಾವುದೇ ಅಹ್ಮದಿಯನ್ನು ಅಲ್ಲಾಹನ ಆರಾಧನೆಗೆ ಸಂಬಂಧಿಸಿ ಮತ್ತು ಮಾಡಿದ ಒಳಿತುಗಳಿಗೆ ಸಂಬಂಧಿಸಿ ಅವುಗಳನ್ನು ಕೊನೆಗೊಳಿಸುವವರನ್ನಾಗಿ ಅಥವಾ ಅವುಗಳಲ್ಲಿ ಕೊರತೆಯನ್ನುಂಟು ಮಾಡುವವರನ್ನಾಗಿ ಮಾಡದಿರಲಿ. ಮಸ್‌ಜಿದ್‌ಗಳಿಗೆ ಹೋಗಲು ಅನುಮತಿ ಲಭಿಸುವ ತನಕ ಮನೆಗಳಲ್ಲಿ ಬಾಜಮಾಅತ್ ನಮಾಝ್ ನಿರ್ವಹಿಸುವವರೂ ಒಳಿತುಗಳನ್ನು ಜಾರಿಯಲ್ಲಿರಿಸುವವರೂ ಆಗಬೇಕು. ಮಸ್‌ಜಿದ್‌ಗಳಿಗೆ ಹೋಗಲು ಅನುಮತಿ ದೊರೆತರೆ ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಮಸ್‌ಜಿದ್‌ಗಳನ್ನು ಜನನಿಬಿಡವನ್ನಾಗಿ ಮಾಡುವುದನ್ನು ಫರ್ಝ್ ಕರ್ಮವಾಗಿ ಮಾಡಿರಿ. ವಿಶಿಷ್ಟವಾಗಿ ಮಹಿಳೆಯರು ಮನೆಗಳಲ್ಲಿ ನಮಾಝ್ ಮಾಡುವ ವ್ಯವಸ್ಥೆ ಮಾಡಬೇಕು. ಮಕ್ಕಳು ತಮ್ಮ ಮುಂದೆ ನಿಮ್ಮ ಉದಾಹರಣೆ ಕಾಣುವವರಾಗಲಿ. ಅಲ್ಲಾಹನ ಬಗ್ಗೆ ವಿಶ್ವಾಸ ಅವರಲ್ಲಿ ದೃಢವಾಗುವಂತಾಗಲಿ. ಮನೆಯಲ್ಲಿ ಕೆಲವು ನಿಮಿಷಗಳ ಕಾಲ ದರ್ಸ್ ನೀಡುವ ವ್ಯವಸ್ಥೆ ಸಹ ಮಾಡಿರಿ. ಆ ಮೂಲಕ ಧಾರ್ಮಿಕ ಜ್ಞಾನ ವರ್ಧಿಸಲಿ. ಇದೇ ರೀತಿ ಎಂ.ಟಿ.ಎ. ಕಾರ್ಯಕ್ರಮಗಳನ್ನು ವೀಕ್ಷಿಸುವ ಕಡೆಗೆ ಸಹ ಗಮನ ಹರಿಸಿರಿ. ಇದಕ್ಕು ಮೊದಲು ನಾನು ಇದರ ಕಡೆ ಗಮನಹರಿಸಿದ್ದೇನೆ.

ಹೀಗಾಗಿ ಲಾಕ್‌ಡೌನಿನ ನಂತರ ಅಥವಾ ರಮಝಾನಿನ ಪವಿತ್ರ ಮಾಸ ಮುಗಿದ ನಂತರ ಆ ಒಳಿತುಗಳನ್ನು ನಾವು ಮರಿಯ ಬಾರದು ಅದರ ಬದಲಿಗೆ ಅದನ್ನು ಜಾರಿಯಲ್ಲಿಡಬೇಕು. ಯಾವ ಅಹ್ಮದಿಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಬೈಅತ್ ಮಾಡಿದ ನಂತರ ತನ್ನಲ್ಲಿ ಶುದ್ಧ ಪರಿವರ್ತನೆಗಳನ್ನು ಮಾಡಿಕೊಳ್ಳುವ ಪ್ರತಿಜ್ಞೆ ಮಾಡುತ್ತಾನೋ ತನ್ನ ಬೈಅತ್ ಪ್ರತಿಜ್ಞೆಯನ್ನು ಮರೆಯಬಾರದು. ಮುಮಿನ್‌ನ ಕೆಲಸವು ಇದಲ್ಲ ಅಂದರೆ ಆತನಿಗೆ ಸಂಕಷ್ಟ ಎದುರಾದರೆ ಅಲ್ಲಾಹನನ್ನು ಸ್ಮರಿಸುತ್ತಾನೆ, ಅಲ್ಲಾಹನ ಸಹಾಯ ಯಾಚಿಸುತ್ತಾನೆ, ಅಲ್ಲಾಹನ ಕಡೆ ಗಮನ ಹರಿಸುತ್ತಾನೆ ಆ ಸಂಕಷ್ಟವೂ ದೂರವಾದರೆ ಅಲ್ಲಾಹನನ್ನು ಮರೆಯುತ್ತಾನೆ. ಹೀಗೆ ಆಗಬಾರದು.

ಇಂದು ಕೆಲವು ಜನರು ಈ ಕರೋನ ವೈರಸ್‌ನ ಸೋಂಕು ಸಾಮಾನ್ಯವಾದ ದುರ್ಘಟನೆ ಆಗಿಯೋ ಅಥವಾ ಅಲ್ಲಾಹನಿಂದ ಶಿಕ್ಷೆ ಆಗಿದಿಯೋ ಎಂಬ ಯೋಚನೆಯಲ್ಲಿ ತೊಡಗಿದ್ದಾರೆ. ಇಂತಹ ಸೋಂಕುಗಳು ಎದುರಾದಾರೆ ಓರ್ವ ಮುಮಿನ್‌ನ ಕರ್ತವ್ಯ ಏನಾಗಿದೆ ಅಂದರೆ ಆತನು ಮೊದಲಿಗಿಂತ ಹೆಚ್ಚು ಅಲ್ಲಾಹನ ಕಡೆ ಗಮನ ಹರಿಸಬೇಕು ಅಲ್ಲಾಹನ ಕಡೆ ಬಾಗ ಬೇಕು. ಕೇವಲ ಇದು ಏನಾಗಿದೆ ಎಂದು ಹುಡುಕುತ್ತಾ ಇರಬಾರದು. ಮತ್ತು ಈ ಕಾಲಘಟ್ಟವೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರದ್ದಾಗಿದೆ. ಇದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರೊಂದಿಗೆ ಅಲ್ಲಾಹನ ಅನೇಕ ವಾಗ್ದಾನಗಳಿವೆ. ಅವು ಪೂರ್ಣಗೊಳ್ಳುತ್ತಿದೆ ಅಥವಾ ಪೂರ್ಣಗೊಳ್ಳುತ್ತಾ ಇವೆ ಮತ್ತು ಮುಂದಿನ ಕಾಲದಲ್ಲಿ ಪೂರ್ಣಗೊಳ್ಳುವುದು. ಅದರಲ್ಲಿ ಎಚ್ಚರಿಕೆಯ ಅಂಶವಿದ್ದಲ್ಲಿ ಮೂಮಿನ್‌ನ ಪ್ರಥಮ ಕೆಲಸ ಅಲ್ಲಾಹನ ಆಸ್ಥಾನದಲ್ಲಿ ಭಯ ಭೀತನಾಗಿ ತನ್ನ ಈಮಾನಿನ ದೃಢತೆಗಾಗಿ ಬಾಗಬೇಕು. ಮತ್ತು ತನ್ನ ಉತ್ತಮ ಅಂತ್ಯಗಾಗಿ ಪ್ರಾರ್ಥಿಸಬೇಕು. ಮೂಲ ವಸ್ತು ಸಹ ಇದೇ ಆಗಿದೆ ಅಂದರೆ ತನ್ನ ಕೊನೆಗಾಲವು ಉತ್ತಮವಾಗಬೇಕೆಂದು. ನಾನು ಅನೇಕ ಬಾರಿ ಈ ಕಾಲಘಟ್ಟದಲ್ಲಿ ಸಂಭವಿಸುತ್ತಿರುವ ವಿಕೋಪಗಳ ಬಗ್ಗೆ ತಿಳಿಸುತ್ತಾ ಇದ್ದೇನೆ ಇದರ ನೇರ ಸಂಬಂಧವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರಿಂದ ಇದೆ. ಆದ್ದರಿಂದ ನಾವು ನಮ್ಮ ಈಮಾನಿನ ದೃಢತ್ವ ಹಾಗೂ ನಮ್ಮ ಅಂತ್ಯವು ಉತ್ತಮವಾಗುವುದಕ್ಕೆ ದುಆ ಮಾಡುತ್ತಿರಬೇಕು. ಮತ್ತು ಲೋಕದ ಸಂರಕ್ಷಣೆಗಾಗಿಯು ಪ್ರಾರ್ಥಿಸುತ್ತಾ ಇರಬೇಕು. ಅಲ್ಲಾಹನು ಪ್ಲೇಗ್ ರೋಗವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸತ್ಯತೆಗೆ ಕುರುಹುವನ್ನಾಗಿ ಮಾಡಿ ಕಳುಹಿಸಿದಾಗ ಅಂತಹ ಸಂದರ್ಭದಲ್ಲಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಲೋಕದ ಸಂರಕ್ಷಣೆಗಾಗಿ ದುಆ ಮಾಡುತ್ತಿದ್ದರು. ಕೊಠಡಿಯ ಒಳಭಾಗದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ದುಆ ಮಾಡುತ್ತಿದ್ದ ರೀತಿ ದುಆ ಆಲಿಸುವವರು ಹೇಳುತ್ತಾರೆ ಅವರ ಕೊಠಡಿಯ ಒಳಗಿನಿಂದ ಮನುಷ್ಯತ್ವವನ್ನು ಸಂರಕ್ಷಿಸಲಿ ಎಂದು ದುಆ ಮಾಡುತ್ತಿರುವ ಧ್ವನಿ ಕೇಳಿಸುತ್ತಿತ್ತು. ಅಲ್ಲಿ ಎಂತಹ ಧ್ವನಿ ಕೇಳಿಸುತ್ತಿತ್ತು ಎಂದರೆ ಅಗ್ನಿಯ ಮೇಲಿರಿಸುವ ಪಾತ್ರೆಯಲ್ಲಿ ನೀರು ಕುದಿಯುವ ರೀತಿಯಲ್ಲಿ ಕೇಳಿಸುತ್ತಿತ್ತು. (ಅನ್ವಾರುಲ್-ಉಲೂಮ್, ಸಂಪುಟ-18, ಪುಟ-514, ರೆಜಿಸ್ಟರ್ ರಿವಾಯಾತ್ ಸಂಪುಟ-7, ಪುಟ-107, ವರದಿ ಹಝ್ರತ್ ಮಾಸ್ಟರ್ ಮುಹಮ್ಮದ್ ಅಲ್ಲಾಹ್ ದಾದ ಸಾಹೆಬ್(ರ))

ಹೀಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಮನುಷ್ಯತ್ವಕ್ಕಾಗಿ ಮನಸ್ಸಿನಾಳದಿಂದ ದುಆ ಮಾಡುತ್ತಿದ್ದರು. ಆದ್ದರಿಂದ ನಾವು ಸಹ ಈ ಮಾರ್ಗವನ್ನು ಅನುಸರಿಸಬೇಕು.

ಈಗ ಕೆಲವು ಜನರು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲರವರ **ಹವಾದಿಸೆ ತಬಈ ಯಾ ಅಝಾಬೆ ಇಲಾಹೀ** (ನೈಸರ್ಗಿಕ ವಿಪತ್ತು ಅಥವಾ ದೈವಿಕ ಶಿಕ್ಷೆ) ಎಂಬ ಲೇಖನವನ್ನು ಕರೋನ ವೈರಸ್ ಹಾವಳಿಯೊಂದಿಗೆ ಸೇರಿಸಲು ಪ್ರಯತ್ನಿಸುತ್ತಿದ್ದಾರೆ. ಸ್ಪಷ್ಟವಾಗಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಕಾಲದ ನಂತರ ವಿಪತ್ತುಗಳ ಮತ್ತು ಸಾಂಕ್ರಾಮಿಕ ರೋಗಗಳ ಸಂಖ್ಯೆ ವರ್ಧಿಸಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಪಷ್ಟವಾಗಿ ಹೇಳಿದ್ದಾರೆ ವಿಪತ್ತುಗಳು ಮತ್ತು ವಿನಾಶಗಳು ಸಂಭವಿಸುವುವು ಎಂದು. ಈ ಸಾಂಕ್ರಾಮಿಕ ರೋಗಗಳ ಪರಿಣಾಮವಾಗಿ ನೋಡಬೇಕಾದ ಮೂಲ ವಸ್ತುವೇನೆಂದರೆ, ಈ ಸಾಂಕ್ರಾಮಿಕ ರೋಗಗಳಿಂದ ಲೋಕದ ಜನರ ಮೇಲೆ ಯಾವ ಪರಿಣಾಮ ಉಂಟಾಗಿದೆ ಎಂದು. ಇದರಲ್ಲಿ ಯಾವ ಸಂಶಯವೂ ಇಲ್ಲ ಆದರೆ ನಾನು ಕಳೆದ ಖುತ್‌ಬದಲ್ಲಿ ಹೇಳಿದ್ದೇನೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹ ಇದನ್ನು ಸ್ಪಷ್ಟಪಡಿಸುತ್ತಾ ಹೇಳಿದ್ದಾರೆ ಕೆಲವು ಮೂಮಿನ್‌ಗಳು ಸಹ ಈ ವಿಪತ್ತುಗಳಿಗೆ ಸಿಲುಕುತ್ತಾರೆ ಆದರೆ ಅವರೆಲ್ಲರ ಪದವಿಯು ಶಹೀದರ ಪದವಿಯಾಗಿದೆ ಮತ್ತು ಅವರ ಅಂತಿಮವೂ ಉತ್ತಮವಾಗಿರುತ್ತದೆ. (ಮಲ್‌ಫೂಝಾತ್ ಸಂಪುಟ-9, ಪುಟ-252)

ಮತ್ತು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಉಪದೇಶದ ಪ್ರಕಾರ ಅವರ ಕೊನೆಯು ಅವರನ್ನು ಸ್ವರ್ಗಕ್ಕೆ ಕರೆದೊಯ್ಯುತ್ತದೆ. ರಸೂಲುಲ್ಲಾಹ್[(ಸ)]ರ ಹೇಳಿದ್ದಾರೆ: ಯಾವ ವ್ಯಕ್ತಿಯ ಜನಾಝದಲ್ಲಿ ಆತನನ್ನು ಜನರು ಹೊಗಳುತ್ತಾರೊ, ಆತನ ಸೇವೆಗಳನ್ನು ಸ್ಮರಿಸಿದರೆ, ಆತನ ಹುಖೂಖುಲ್ ಇಬಾದ್ ಹಾಗೂ ಹುಖೂಖುಲ್ಲಾಹ್‌ದ ಬಗ್ಗೆ ಸಾಕ್ಷಿ ನೀಡಿದರೆ ಆತನ ಮೇಲೆ ಜನ್ನತ್ ಫರ್ಝ್ ಆಗುವುದು. (ಸಹೀಹ್ ಮುಸ್ಲಿಮ್, ಕಿತಾಬುಲ್ ಜನಾಎಝ್, ಹದೀಸ್-949)

ನಾನು ನೋಡುವುದೇನೆಂದರೆ ಅನೇಕ ಜನರು, ಅದರಲ್ಲಿ ಅನೇಕ ನಿಷ್ಠಾವಂತ ಅಹ್ಮದಿಯರು ಸಹ ಇದ್ದಾರೆ ಅವರೆಲ್ಲರ ಬಗ್ಗೆ ಎಲ್ಲರ ಅಭಿಪ್ರಾಯಗಳು ಇದೇ ಆಗಿತ್ತು. ಆದರೆ ಈ ಸಾಂಕ್ರಾಮಿಕ ರೋಗದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಇದರಿಂದ ಸಾಮಾನ್ಯವಾಗಿ ಲೌಕಿಕ ಜನರ ಮೇಲೆ ಎಂತಹ ಪ್ರಭಾವ ಬೀರಿದೆ ಎಂದಾಗಿದೆ. ಭೌತಿಕವಾಗಿ ಜನರು ತಬ್ಬಿಬ್ಬಾಗಿದ್ದಾರೆ. ಬಹಳ ಬಲಶಾಲಿ ಸರಕಾರಗಳ ಆರ್ಥಿಕ ವ್ಯವಸ್ಥೆಗಳು ಮತ್ತು ಆಡಳಿತ ವ್ಯವಸ್ಥೆಗಳು ಅಸ್ತವ್ಯಸ್ತವಾಗಿವೆ. ಅವರು ತಮ್ಮ ಪ್ರಜೆಗಳ ಗಮನವನ್ನು ಬೇರೆಡೆಗೆ ತಿರುಗಿಸಲು ಮಾಡುತ್ತಿರುವ ಪ್ರಯತ್ನಗಳು ಹೆಚ್ಚು ಅಪಾಯಕಾರಿಗಳಾಗಿವೆ. ಅವು ಯುದ್ಧದ ಕಡೆಗೆ ಮತ್ತು ಇನ್ನಷ್ಟು ವಿನಾಶದ ಕಡೆಗೆ ದೂಡುವುವು. ಎಲ್ಲಿಯ ತನಕ ಈ ಜನರು ತಮ್ಮೊಳಗೆ ಬದಲಾವಣೆಯನ್ನು ಉಂಟುಮಾಡುವುದಿಲ್ಲವೋ ಮತ್ತು ಅಸ್ತವ್ಯಸ್ತ ಪರಿಸ್ಥಿತಿಯನ್ನು ದೂರಸರಿಸುವುದಿಲ್ಲವೋ ಅಲ್ಲಿನ ತನಕ ಈ ಜನರು ಒಂದರನಂತರ ಇನ್ನೊಂದು ವಿನಾಶದಲ್ಲಿ ಮುಳುಗುತ್ತಾ ಇರುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸಹ ಹೀಗೆ ಹೇಳಿದ್ದಾರೆ ಧಾರ್ಮಿಕ ತಪ್ಪುಗಳಿಗೆ ಶಿಕ್ಷೆ ಖಿಯಾಮತ್ ದಿನದಲ್ಲಿ ವಿಧಿಸಲ್ಪಡುವುದು. ಆದರೆ ಗಲಬೆಗೊಂದಲ ಮಾಡುವುದು, ಹಕ್ಕುಗಳನ್ನು ಅಪಹರಿಸುವುದು, ಅಲ್ಲಾಹನ ದಾಸರನ್ನು ಪರಿಹಾಸ ಮಾಡುವುದು ಮೊದಲಾದುವುಗಳಿಂದ ಭಯಾನಕ ವಿನಾಶಗಳು ಹುಟ್ಟುತ್ತವೆ. (ಕಿಶ್ತಿ-ಎ-ನೂಹ್, ರೂಹಾನಿ ಖಝಾಯಿನ್ ಸಂಪುಟ-19, ಪುಟ-5)

ಈಗ ನಮ್ಮ ಕೆಲಸವೇನೆಂದರೆ, ದುಆ ಮಾಡುವುದು, ಲೋಕಕ್ಕೆ ಮನವರಿಕೆ ಮಾಡಿಕೊಡುವುದು, ನಮ್ಮ ಸ್ಥಿತಿಯನ್ನು ಪರಿಶುದ್ಧವಾಗಿ ಮಾಡುವುದು ಆಗಿದೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲರ ಲೇಖನದ ಬಗ್ಗೆ ನಾನು ಪ್ರಸ್ತಾಪಿಸುತ್ತಾ ಇದ್ದೆ ಅದು ಬಹಳ ಸುದೀರ್ಘ ಲೇಖನವಾಗಿದೆ ಆದರೆ ಪ್ರತಿಯೊಬ್ಬ ಅಹ್ಮದಿಯರು ಗಮನಸಬೇಕಾದ ವಿಷಯವೇನೆಂದರೆ ಕೇವಲ ಹಿಂದಿನ ಕಾಲದ ಖೌಮಿನ ಜನರೊಂದಿಗೆ ಏನಾಯಿತು ಅಥವಾ ಈಗ ಏನಾಗುತ್ತಿದೆ ಎಂದು ಯೋಚಿಸುವುದಲ್ಲ.

ನಿಸ್ಸಂದೇಹವಾಗಿಯು ಈ ವಿಷಯದಿಂದಲೂ ಭಯಭೀತರಾಗಬೇಕು. ಆದರೆ ಬಹು ಮುಖ್ಯವಾದ ವಿಷಯವೇನೆಂದರೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿ[ರ] ರವರ ಈ ಲೇಖನದಲ್ಲಿ ತಮ್ಮ ಜಮಾಅತ್ತಿನ ಸದಸ್ಯರಿಗೆ ತಿಳಿಮಾತು ಹಾಗೂ ಸುವಾರ್ತೆ ಇದೆ.

ಅಹ್ಮದಿಯಾ ಜಮಾಅತಿಗೆ ಹೀಗೆ ಎಚ್ಚರಿಕೆ ನೀಡಲಾಗಿದೆ. ಕೇವಲ ಅಹ್ಮದಿಯ್ಯತ್ ಅಂಗೀಕರಿಸುವುದು ರಕ್ಷಿಸಲ್ಪಡಲು ಸಾಕಾಗಲಾರದು. ತಖ್ವದ ಶರತ್ತು ಸಹ ಅದರೊಂದಿಗೆ ಜೋಡಿಸಲ್ಪಟ್ಟಿದೆ. ಶುಭವಾರ್ತೆ ಏನೆಂದರೆ ಜಮಾಅತ್‌ನಲ್ಲಿ ಕರ್ಮಗಳಲ್ಲಿ ಸಂಭವಿಸಿರಬಹುದಾದ ಬಲಹೀನತೆಗಳನ್ನು ಸುಧಾರಣೆ ಮಾಡಲು ಅಹ್ಮದಿಯರು ವೇಗವಾಗಿ ಪ್ರಯತ್ನಿಸುವರು ಎಂಬುದಾಗಿದೆ. ಹೀಗೆ ಇದರ ಸಾರಾಂಶವು ಹೀಗಿದೆ, ಯಾರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಕೇವಲ ಹೆಸರಿಗಾಗಿ ಬೈಅತ್ ಪ್ರತಿಜ್ಞೆ ಮಾಡಿದ್ದಾರೊ ಅವರೆಲ್ಲರು ಹಝ್ರತ್ ಮಸೀಹ್ ಮೌಊದ್(ಅ) ರವರ ಬೋಧನೆಗಳ ಕಡೆ ಬಾಗಿದರೆ ಮಾತ್ರ ಅವರಿಗೆ ಉಳಿಯಲು ಸಾಧ್ಯ ಮತ್ತು ಹೀಗೆ ಅಲ್ಲಾಹನ ಕಡೆ ಹಿಂದಿರುಗುವುದೇ ಅವರಿಗೆ ಶುಭವಾರ್ತೆ ಆಗಿದೆ. ಇಲ್ಲದಿದ್ದರೆ ಯಾವ ಶುಭವಾರ್ತೆಯು ಇಲ್ಲ.

(ಹವಾದಿಸೆ ತಬ್‌ಈ ಯಾ ಅಝಾಬೆ ಇಲಾಹಿ, ಪುಟ-121)

ನಾನು ಹೇಳಿದ ಹಾಗೆ ಈ ದಿನಗಳಲ್ಲಿ ಸಂಭವಿಸಿರುವ ವೈಶಿಷ್ಟ್ಯಪೂರ್ಣ ಒಳಿತುಗಳ ಕಡೆಗೆ ಲಕ್ಷ್ಯ ಕೊಡುವುದನ್ನು ಇನ್ನು ಮುಂದೆ ಸಹ ಜಾರಿಯಲ್ಲಿರಿಸಬೇಕು. ನೀವು ಸ್ವತಃ ಮತ್ತು ನಿಮ್ಮ ಮಕ್ಕಳು ಸಹ ಹುಖೂಖುಲ್ಲಾಹ್ ಮತ್ತು ಹುಖೂಖುಲ್ ಇಬಾದ್ ಈಡೇರಿಸುವ ಬಗ್ಗೆ ಗಮನ ಹರಿಸುವಂತೆ ಮಾಡಬೇಕು. ಲೋಕದಲ್ಲಿ ವಿನಾಶ ಸಂಭವಿಸಿದ ನಂತರ ಲೋಕದ ಜನರು ಅಲ್ಲಾಹನ ಕಡೆಗೆ, ಹಕ್ಕುಗಳನ್ನು ಈಡೇರಿಸುವ ಕಡೆಗೆ ದೃಷ್ಟಿ ಹಾಯಿಸುವಾಗ ಜನರು ಅಹ್ಮದಿಯಾ ಜಮಾಅತ್ ಕಡೆಗೆಯೇ ನೋಡುವರು. ಆಗ ಲೋಕಕ್ಕೆ ಸರಿಯಾದ ಮಾರ್ಗದರ್ಶನ ನೀಡಬಲ್ಲವರು ಅಹ್ಮದಿಯರೇ ಆಗುವರು. ಆದರೆ ಅದರ ಮೊದಲು ನಾವು ನೋವಿನೊಂದಿಗೆ ಪ್ರಾರ್ಥಿಸುವುದು ಆವಶ್ಯಕವಾಗಿದೆ. ಲೋಕವು ಪ್ರಕಾಶ ಮತ್ತು ಶಾಂತಿಯ ಕಡೆಗೆ ಮರಳುವ ಮಾರ್ಗವೇ ಮುಚ್ಚಲ್ಪಡುವ ಸ್ಥಿತಿಯು ಸಂಭವಿಸುವಂತಹ ಕಾಲ ಬಂದೆರಗದಿರಲಿ. ಅದಕ್ಕು ಮುಂಚೆಯೇ ಜನರ ದೃಷ್ಟಿ ಅದರ ಕಡೆ ಹಾಯಿಸುವಂತಾಗಲಿ. ಆದ್ದರಿಂದ ನಾವು ನಮ್ಮ ದುಆವಿನ ಜೊತೆಗೆ ನಮ್ಮ ಕರ್ಮಗಳನ್ನು ಸಹ ತೋರಿಸುವ ಅವಶ್ಯಕತೆ ಇದೆ. ಪರಸ್ಪರ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವುದರಿಂದಲೇ ಅಲ್ಲಾಹನ ಕರುಣೆ ಪಡೆಯಬಹುದಾಗಿದೆ ಎಂದು ಲೋಕಕ್ಕೆ ತೋರಿಸ ಬೇಕಾಗಿದೆ. ಮತ್ತು ಅಲ್ಲಾಹನು ಏಕಾಂಗಿ ಆಗಿದ್ದಾನೆ ಮತ್ತು ಆತನ ಕರುಣೆ ಪಡೆಯದ ಹೊರತು ಶಾಂತಿ ಸ್ಥಾಪಿಸುವ ನಮ್ಮ ಪ್ರಯತ್ನವು ಸಾರ್ಥಕವಾಗುವುದಿಲ್ಲ ಮತ್ತು ಮೃತ್ಯುವಿನ ನಂತರವೂ ಅಂತಿಮ ಉತ್ತಮವಾಗುವುದಿಲ್ಲ.

ಅಲ್ಲಾಹನ ಅನುಗ್ರಹದಿಂದ ಇಂದಿನ ಪರಿಸ್ಥಿತಿಯಲ್ಲಿ ಜಮಾಅತ್ತಿನ ಜನರು ತಮ್ಮ ಆರಾಧನೆಯ ಕಡೆ ಗಮನ ಹರಿಸಿದ್ದಾರೆ. ಅಲ್ಲಿಯೇ ಖುದ್ದಾಮ್, ಅನ್ಸಾರ್ ಹಾಗೂ ಲಜ್ನ ಮಾನವ ಸೇವೆಯಲ್ಲಿ ತೊಡಗಿದ್ದಾರೆ. ಇದರ ಬಗ್ಗೆಯು ಎಲ್ಲಾ ಕಡೆಯಿಂದಲೂ ಒಳ್ಳೆಯ ವರದಿಗಳು ಸಿಗುತ್ತಿದೆ. ಈ ಮಾನವ ಸೇವೆಯು ಕೆಲವು ಜನರಿಗೆ ಮಾರ್ಗದರ್ಶಿಯಾಗುತ್ತಿದೆ.

ಕೆನಡದ ಹಿಂದಿನ ದಿನಗಳ ವರದಿ ಹೀಗಿತ್ತು. ಓರ್ವ ಮಹಿಳೆ ಮಧ್ಯರಾತ್ರಿ 2 ಗಂಟೆಗೆ ಖುದ್ದಾಮರ ಒಂದು ಸಹಾಯವಾಣಿಗೆ ಕರೆಮಾಡಿದರು. ಆ ಮಹಿಳೆ ಎಲ್ಲಾ ಕಡೆಯಿಂದ ಸಹಾಯ ಸಿಕ್ಕದೆ ನಿರಾಶರಾಗಿ ಇವರಿಗೆ ಫೋನ್ ಮಾಡಿ ಅವಳ ಸಂಕಷ್ಟ ತಿಳಿಸಿದಳು. ಅವಳ ಪುತ್ರ ಅನಾರೋಗ್ಯ ಪೀಡಿತನಾಗಿದ್ದನು ಔಷಧಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಆ ಮಹಿಳೆ ಹೇಳುತ್ತಾಳೆ, ಜನರು ಹೇಳುತ್ತಾರೆ ದೇವರಿದ್ದಾನೆ ಎಂದು. ನಾನು ದೇವನನ್ನು ನಂಬುತ್ತಿರಲಿಲ್ಲ ಆದರೆ ಇಂದು ನಂಬಿ ನೋಡೋಣ ಎಂದು ಹೇಳಿಕೊಂಡಳು. ಹೀಗೆ ನಾನು ಬಹಳ ನೋವಿನಿಂದ ದುಆ ಮಾಡಿದೆ ಓ ದೇವರೇ! ಒಂದು ವೇಳೆ ನಿನ್ನ ಅಸ್ತಿತ್ವ ಇದ್ದರೆ ನನ್ನ ಪುತ್ರ ಅನಾರೋಗ್ಯನಾಗಿದ್ದಾನೆ ಆತನಿಗಾಗಿ ಔಷಧಿಯ ವ್ಯವಸ್ಥೆ ಮಾಡು ಎಂದು. ಅದರೊಂದಿಗೆ ಖುದ್ದಾಮರ ಸಹಾಯವಾಣಿಯ ಬಗ್ಗೆ ನನಗೆ ನೆನಪಾಯಿತು. ಫೋನ್ ಮಾಡಿದಾಗ ಓರ್ವ ವ್ಯಕ್ತಿ ಫೋನ್ ತೆಗೆದರು. ಅವರಿಗೆ ಅವರ ಅವಶ್ಯಕತೆ ತಿಳಿಸಿದಾಗ ಅವರು ಹೇಳಿದರು ನಾನು ಪ್ರಯತ್ನಿಸುವೆನು ಎಂದು. ಸ್ವಲ್ಪ ಸಮಯದ ನಂತರ ಆ ವ್ಯಕ್ತಿಯ ಮತ್ತೆ ಫೋನ್ ಬಂತು ಈಗ ಮಧ್ಯರಾತ್ರಿ ಎರಡು ಗಂಟೆ ಆಗುತ್ತಿದೆ ವ್ಯವಸ್ಥೆ ಆಗುವುದು ಕಷ್ಟ ಎಂದು ಹೇಳಿದರು. ಆ ವ್ಯಕ್ತಿ ಮತ್ತೆ ಪ್ರಶ್ನಿಸಿದರು ನಿಮ್ಮ ಪುತ್ರನ ಪರಿಸ್ಥಿತಿ ಹೇಗಿದೆ? ಎಂದು. ಮತ್ತೆ ನಾನು ಅವರಿಗೆ ನನ್ನ ಪರಿಸ್ಥಿತಿ ಹೇಳಿಕೊಂಡೆ. ಸರಿ ನಾನೇ ಹೋಗಿ ಪರಿಶೀಲಿಸುತ್ತೇನೆ. ಒಂದು ಕಡೆ ಔಷಧಿ ಅಂಗಡಿ ತೆರೆದಿರುತ್ತದೆ ನಾನು ಅಲ್ಲಿ ಹೋಗುವೆನು. ಒಂದು ವೇಳೆ ಅದು ತೆರೆದಿದ್ದರೆ ಔಷಧಿ ತೆಗೆದುಕೊಂಡು ಬರುವೆನು ಎಂದರು. ಅವರು ರಾತ್ರಿ ನಿದ್ರೆಯಿಂದ ಎದ್ದ ಹೋದರು. ಆ ಮಹಿಳೆ ಹೇಳುತ್ತಾರೆ ನಾನು ಅವರನ್ನು ಎಚ್ಚರಗೊಳಿಸಿದಾಗ ಅವರು ನಿದ್ರೆಯಲ್ಲಿದ್ದರು ಆದರೂ ಅವರು 50 ಕಿಲೋ ಮೀಟರ್ ಪ್ರಯಾಣಿಸಿ ನನಗೆ ಔಷಧಿ ತೆಗೆದುಕೊಂಡು ಬಂದರು. ಈ ಘಟನೆಯಿಂದ ನನಗೆ ಅಲ್ಲಾಹನ ಅಸ್ತಿತ್ವದ ಬಗ್ಗೆ ಅರಿವಾಯಿತು ಮತ್ತು ಈ ಅರಿವು ಅಹ್ಮದಿ ಯುವಕನ ಕಾರಣದಿಂದ ನನಗೆ ದೊರೆಯಿತು. ನಾನು ಆತನಿಗೆ ಕೃತಜ್ಞಳಾಗಿದ್ದೇನೆ.

ಈ ದಿನಗಳಲ್ಲಿ ನಾವು ಮಾನವೀಯತೆ ಸೇವೆಯಲ್ಲಿ ತೊಡಗಿ ದಾಸರನ್ನು ಅಲ್ಲಾಹನ ಸಾಮೀಪ ತರಬಹುದು ಆದ್ದರಿಂದ ಇದನ್ನು ಗಳಿಸಲು ನಾವೆಲ್ಲರು ಪ್ರಯತ್ನಿಸಬೇಕು. ವಿಪತ್ತು ಸಂಭವಿಸುತ್ತದೆಯೋ ಅಥವಾ ಇಲ್ಲವೋ ಎಂದೂ ನೋಡಬಾರದು. ಅದೇ ರೀತಿ ಪವಿತ್ರ ಮಾಸ ರಮಝಾನ್‌ನಲ್ಲಿ ನಮಗೆ ಬೇರೆಯವರ ಸಂಕಷ್ಟದ ಅನುಭವವನ್ನು ನೀಡಿದೆ ಅದನ್ನು ಜಾರಿಯಲ್ಲಿಡಬೇಕು. ಅಂದರೆ ಬೇರೆಯವರ ಸಂಕಷ್ಟಗಳನ್ನು ಅನುಭವಿಸುತ್ತಾ ಇರಬೇಕು. ಏಕೆಂದರೆ ರಮಝಾನಿನ ಪವಿತ್ರ ಮಾಸದ ಒಂದು ಉದ್ದೇಶವೂ ಇದೇ ಆಗಿದೆ ಅಂದರೆ ಬೇರೆಯವರ ಸಂಕಷ್ಟ ತೊಂದರೆಗಳನ್ನು ಅನುಭವಿಸಿರಿ.

ಹೀಗೆ ಈ ಸಾಂಕ್ರಮಿಕ ರೋಗದ ಕಾರಣ ಲೋಕದ ಸಾಮಾನ್ಯ ಸ್ಥಿತಿ ಹಾಗೂ ಪವಿತ್ರ ಮಾಸ ರಮಝಾನ್ ಈಗ ನಮಗೆ ನಮ್ಮ ಹೊಣೆಗಾರಿಕೆಗಳನ್ನು ತಿಳಿಸುವಂತಾಗಬೇಕು. ರಮಝಾನ್ ನಾಳೆ ಅಥವಾ ನಾಡಿದ್ದು ಮುಗಿಯುತ್ತದೆ ಆದರೆ ನಾವು ಅದರ ಒಳಿತನ್ನು ನಮ್ಮಲ್ಲಿ ಸದಾ ಇರಿಸಿಕೊಳ್ಳ ಬೇಕಾಗಿದೆ. ಆ ಒಳ್ಳೆಯ ಪರಿವರ್ತನೆಗಳನ್ನು ನಾವು ನಮ್ಮೊಳಗೆ ಇರಿಸಿಕೊಳ್ಳಬೇಕಾಗಿದೆ. ಅನಂತರ ಲಾಕ್‌ಡೌನ್ ಸಡಿಲಗೊಳಿಸಿದಾಗ ನಾವು ನಮ್ಮ ಹಾಗೂ ಮಾನವೀಯತೆಯ ಹೊಣೆಗಾರಿಕೆಗಳನ್ನು ಮರೆಯಬಾರದು. ಯಾವಾಗಲು ನೆನಪಿಡಿರಿ! ನೀವು ಅಲ್ಲಾಹನ ಹಾಗೂ ದಾಸರ ಹಕ್ಕುಗಳನ್ನು ಈಡೇರಿಸುತ್ತಿರುವಾಗ ಅನ್ಯರಿಗೂ ಸಹ ಈ ಹಕ್ಕುಗಳನ್ನು ಈಡೇರಿಸಲು ಪ್ರೋತ್ಸಾಹಿಸಿರಿ. ನಾವು ಈ ಕಾಲಘಟ್ಟದ ಮಸೀಹೆ ಮೌಊದ್ ಅಲೈಹಿಸ್ಸಲಾಮ್‌ರವರನ್ನು ನಂಬಿದ್ದೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಯಾವ ಸಭೆಯು ಅಲ್ಲಾಹ್ ಹಾಗೂ ಅವನ ಸಂದೇಶವಾಹಕನ ಬೋಧನೆಗಳ ಮೂಲಕ ನಮ್ಮ ಸ್ಥಾನ ಹಾಗೂ ಗುಣಮಟ್ಟದ ಕಡೆ ಗಮನ ಹರಿಸಲು ಪ್ರಯತ್ನಿಸುತ್ತಿದ್ದರು.

ಆದ್ದರಿಂದ ನಾವು ಯಾವಾಗಲು ಅವರ ಈ ಉಪದೇಶಗಳನ್ನು ನೈಜ್ಯ ಈಮಾನ್ ಪಡೆಯಲು ನೆನಪಿಸಿಕೊಳ್ಳುತ್ತಿರಬೇಕು. ಅನ್ಯರ ದೌರ್ಬಲ್ಯದ ಕಡೆ ಗಮನ ಹರಿಸುವ ಬದಲು ನಾವು ನಮ್ಮ ಪರಿಸ್ಥಿತಿಯನ್ನು ಪರಿಶೀಲಿಸುತ್ತಿರಬೇಕು. ಇದರ ಬಗ್ಗೆ ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕೆಲವು ಉಲ್ಲೇಖಗಳನ್ನು ಪ್ರಸ್ತಾಪಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಯಾವ ಮಟ್ಟದಲ್ಲಿ ನೋಡುತ್ತಿದ್ದರು. ಒಂದು ಸಂದರ್ಭದಲ್ಲಿ ನಮ್ಮ ಈ ಮಟ್ಟದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಪ್ರತಿಯೊಬ್ಬನು ತಹಜ್ಜುದ್ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕು ಮತ್ತು ಐದು ಹೊತ್ತಿನ ನಮಾಝಿನಲ್ಲಿ ಖುನೂತ್ ಸೇರಿಸಿಕೊಳ್ಳಿರಿ. ಅಲ್ಲಾಹನನ್ನು ಕೋಪಗೊಳಿಸುವ ಪ್ರತಿಯೊಂದು ವಿಷಯಗಳಿಂದ ತೌಬ ಮಾಡಿರಿ. ತೌಬ ಎಂದರೆ ಆ ಎಲ್ಲಾ ತಪ್ಪು ಕಾರ್ಯಗಳಿಂದ ಹಾಗೂ ಅಲ್ಲಾಹನ ಒಪ್ಪಿಗೆ ಇಲ್ಲದ ಮಾತುಗಳನ್ನು ತ್ಯಜಿಸಿ ನೈಜ ಪರಿವರ್ತನೆ ಮಾಡಿಕೊಳ್ಳಿರಿ ಮತ್ತು ಮುಂದೆ ಸಾಗಿರಿ ಮತ್ತು ತಖ್ವಗಳಿಸಿರಿ. ಇದರಲ್ಲಿಯು ಅಲ್ಲಾಹನ ಕರುಣೆ ಇರುತ್ತದೆ." ಹೇಳುತ್ತಾರೆ "ಮನುಷ್ಯನ ಸ್ವಭಾವವನ್ನು ಸಭ್ಯಗೊಳಿಸಿರಿ. ಕೋಪಗೊಳ್ಳದಿರಿ, ವಿನಮ್ರತೆ ಅದರ ಸ್ಥಾನ ಪಡೆಯಬೇಕಾಗಿದೆ. ನೀತಿಯನ್ನು ಸರಿಪಡಿಸುವುದರೊಂದಿಗೆ ತಮ್ಮ ಸಾಮರ್ಥ್ಯಕ್ಕನುಸಾರ ಸದಖಗಳನ್ನು ನೀಡಿರಿ. **ಯುತ್‌ಈಮೂನತ್ತಾಮ ಅಲಾ ಹುಬ್ಬಿಹೀ ಮಿಸ್ಕೀನವ್ವ ಯತೀಮವ್ವ ಅಸೀರ** (ಅದ್ದಹರ್:9) ಅಂದರೆ: ಅಲ್ಲಾಹನ ಒಪ್ಪಿಗೆಗಾಗಿ ನಿರ್ಗತಿಕರನ್ನು, ಅನಾಥರನ್ನು ಹಾಗೂ ಸೆರೆಯಾಳುಗಳನ್ನು ಊಟ ನೀಡುವವರು ಮತ್ತೆ ಹೇಳುತ್ತಾರೆ ವಿಶೇಷವಾಗಿ ಅಲ್ಲಾಹನ ಒಪ್ಪಿಗೆಗಾಗಿ ನಾವು ನೀಡುತ್ತೇವೆ ಮತ್ತು ಆ ಭಯಾನಕವಾದ ದಿನದ ಬಗ್ಗೆ ಭಯಭಿತರಾಗುತ್ತೇವೆ. ಸಾರಾಂಶ ಏನಾಗಿದೆ ಎಂದರೆ ದುಆದಿಂದ, ತೌಬ ಮಾಡುತ್ತಾ ಇರಿ ಮತ್ತು ಸದಖಗಳನ್ನು ನೀಡುತ್ತಾ ಇರಿ. ಅಲ್ಲಾಹನು ನಿಮ್ಮೊಂದಿಗೆ ತನ್ನ ಕರುಣೆಯಿಂದ ವರ್ತಿಸುವನು.

(ಮಲ್ಫೂಝಾತ್, ಸಂಪುಟ-1, ಪುಟ-208, 1984 ಮುದ್ರಣ)

ಮತ್ತೆ ಜಮಾಅತ್ತನ್ನು ಉಪದೇಶಿಸುತ್ತಾ ಹೇಳುತ್ತಾರೆ:

"ಅಲ್ಲಾಹನು ಯಾರ ಬಗ್ಗೆಯು ಚಿಂತಿಸುವುದಿಲ್ಲ ಆದರೆ ಭಯಭಕ್ತಿ ಇರಿಸುವವನ ಬಗ್ಗೆ ಚಿಂತಿಸುತ್ತಾನೆ. ಪರಸ್ಪರ ಸಹೋದರತ್ವ, ಪ್ರೀತಿಯನ್ನು ಸೃಷ್ಟಿಸಿರಿ ಮತ್ತೆ ಮೃಗತ್ವ ಹಾಗೂ ಭಿನ್ನಭಿಪ್ರಾಯವನ್ನು ತ್ಯಜಿಸಿರಿ. ಪ್ರತಿಯೊಂದು ರೀತಿಯ ಹರಟೆಮಾತು ಹಾಗೂ ಅಪಹಾಸ್ಯದಿಂದ ದೂರವಿರಿ ಏಕೆಂದರೆ ಅಪಹಾಸ್ಯ ಮನುಷ್ಯನ ಮನಸ್ಸನ್ನು ಸತ್ಯತೆಯಿಂದ ಎಷ್ಟು ದೂರ ಇರಿಸುತ್ತದೆ ಎಂದರೆ ಅದು ಎಲ್ಲಿಂದ ಎಲ್ಲಿಗೋ ತಲುಪಿಸುತ್ತದೆ. ಪರಸ್ಪರ ಒಬ್ಬರನ್ನೊಬ್ಬರ ಬಗ್ಗೆ ಗೌರವದಿಂದ ವರ್ತಿಸಿರಿ. ಪ್ರತಿಯೊಬ್ಬರು ತಮ್ಮ ಆರಾಮದೊಂದಿಗೆ ತನ್ನ ಸಹೋದರನ ಆರಾಮಕ್ಕೂ ಆದ್ಯತೆ ನೀಡಿರಿ. ಅಲ್ಲಾಹನಂದ ನಿಜವಾಜ

ಮೈತ್ರಿಯನ್ನು ಸೃಷ್ಟಿಸಿಕೊಳ್ಳಿರಿ ಮತ್ತು ಅಲ್ಲಾಹನೊಡನೆ ವಿಧೇಯರಾಗಿರಿ. ಅಲ್ಲಾಹನ ಕೋಪ ಭೂಮಿಯ ಮೇಲೆ ಅವತರಿಸುತ್ತಿದೆ ಮತ್ತು ಯಾರು ಸಂಪೂರ್ಣವಾಗಿ ತಮ್ಮ ಎಲ್ಲಾ ಪಾಪಗಳಿಂದ ತೌಬ ಮಾಡಿ ಅಲ್ಲಾಹನ ಆಸ್ಥಾನದಲ್ಲಿ ಬರುತ್ತಾರೊ ಅವರು ಅದರಿಂದ ಉಳಿಯುವವರು.

ನೀವು ನೆನಪಿನಲ್ಲಿಟ್ಟಿಕೊಳ್ಳಿ! ಒಂದು ವೇಳೆ ನೀವು ಸ್ವತಃ ತಮ್ಮನ್ನು ಅಲ್ಲಾಹನ ಆಜ್ಞೆಯ ಪ್ರಕಾರ ಅನುಸರಿಸಿದರೆ ಮತ್ತು ಆತನ ದೀನಿನ ಬೆಂಬಲಕ್ಕೆ ಪ್ರಯತ್ನಿಸಿದರೆ ಅಲ್ಲಾಹನು ನಿಮ್ಮ ಎಲ್ಲಾ ತಡೆಗಳನ್ನು ಸರಿಸುವನು ಮತ್ತು ನೀವು ಯಶಸ್ವಿಯಾಗುವಿರಿ. ಏನು ನೀವು ನೋಡಲಿಲ್ಲವೇ ಒರ್ವ ಕೃಷಿಕ ಉತ್ತಮ ಬೆಳೆಗಾಗಿ ತೋಟದಿಂದ ನಿಷ್ಪ್ರಯೋಜಕ ವಸ್ತುಗಳನ್ನು ತೆಗೆದು ಹಾಕುತ್ತಾನೆ ಮತ್ತು ತನ್ನ ತೋಟವನ್ನು ಹರ್ಷಭರಿತ ಗಿಡ ಮರಗಳಿಂದ ಅಲಂಕರಿಸುತ್ತಾನೆ ಮತ್ತು ಅದರ ರಕ್ಷಣೆ ಮಾಡುತ್ತಾನೆ ಮತ್ತು ಪ್ರತಿಯೊಂದು ನಷ್ಟದಿಂದ ಅದನ್ನು ಸಂರಕ್ಷಿಸುತ್ತಾನೆ ಆದರೆ ಆ ಗಿಡ, ಮರಗಳು ಫಸಲಿಲ್ಲದೆ ಅಥವಾ ಒಣಗಿ ಹೋದರೆ ಅದರ ಸಹುಕಾರ ಅದನ್ನು ಯಾವ ಪ್ರಾಣಿಯಾದರು ತಿನ್ನಲಿ ಅಥವಾ ಮರ ಕಡಿಯುವವನು ಕಡೆದುಕೊಂಡು ಹೋದರು ಅದರ ಬಗ್ಗೆ ಚಿಂತಿಸುವುದಿಲ್ಲ. ಹೀಗೇಯೇ ನೀವು ನೆನಪಿನಲ್ಲಿಟ್ಟಿಕೊಳ್ಳಿ ಒಂದು ವೇಳೆ ನೀವು ಅಲ್ಲಾಹನ ಆಸ್ಥಾನದಲ್ಲಿ ಸಾದಿಖ್ (ಸತ್ಯಾವಂತ) ಎಂದು ಪರಿಗಣಿಸಲ್ಪಟ್ಟರೆ ನಿಮಗೆ ಯಾವ ವಿರೋಧವು ಯಾವ ರೀತಿಯಲ್ಲಿಯು ತೊಂದರೆ ನೀಡುವುದಿಲ್ಲ. ಆದರೆ ನೀವು ನಿಮ್ಮ ಪರಿಸ್ಥಿತಿಗಳನ್ನು ಸರಿ ಪಡಿಸಲಿಲ್ಲವಾದರೆ ಮತ್ತು ಅಲ್ಲಾಹನಗೆ ವಿಧೇಯತೆಯ ಪ್ರತಿಜ್ಞೆ ಮಾಡುವುದಿಲ್ಲವಾದರೆ ಅಲ್ಲಾಹನಿಗೂ ಯಾರ ಚಿಂತೆಯು ಇಲ್ಲ."

ಹೇಳಿದರು ".......ನೀವೆಲ್ಲರು ಅಲ್ಲಾಹನ ಆತ್ಮೀಯರಲ್ಲಿ ಸೇರಿಕೊಳ್ಳಬೇಕಾಗಿದೆ....... ಪ್ರತಿಯೊಬ್ಬರು ಪರಸ್ಪರ ಜಗಳ, ಆಕ್ರೋಷ ಮತ್ತು ವೈರತ್ವವನ್ನು ದೂರೀಕರಿಸಬೇಕು ಏಕೆಂದರೆ ಈಗ ಎಂತಹ ಸಮಯವಾಗಿದೆ ಎಂದರೆ ನೀವು ಚಿಕ್ಕ ಚಿಕ್ಕ ವಿಷಯಗಳನ್ನು ತ್ಯಜಿಸಿ ಮುಖ್ಯವಾದ ಹಾಗೂ ಬೃಹತ್ತಾದ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು. ಜನರು ನಿಮ್ಮನ್ನು ವಿರೋಧಿಸುವರು." ಹೇಳುತ್ತಾರೆ ಯಾರನ್ನು ಪರಿಗಣಿಸಬೇಡಿರಿ. ".......ಈ ಮಾತನ್ನು ವಸಿಯ್ಯತ್‌ನ ರೀತಿಯಲ್ಲಿ ನೆನಪಿಡಿ ಎಂದೂ ಕೋಪಗೊಳ್ಳ ಬೇಡಿರಿ." ವಿರೋಧಿಸುವರು ಆದರೆ ನೀವು ಎಂದೂ ಕೋಪಗೊಳ್ಳಬಾರದು. "ಬದಲಿಗೆ ಮೃದು ಸ್ವಭಾವದಿಂದ ಒಬ್ಬರನ್ನೊಬ್ಬರಿಗೆ ತಿಳಿಸಿರಿ." (ಮಲ್‌ಫೂಝಾತ್, ಸಂಪುಟ–1, ಪುಟ–266–268, ಮುದ್ರಣ 1984)

ನಮ್ಮ ಗುಣಗಳ ಪರಿಸ್ಥಿತಿಯನ್ನು ಸರಿಪಡಿಸುವುದು ಮತ್ತು ಹುಖೂಖುಲ್ ಇಬಾದ್ ಕಡೆ ಗಮನಹರಿಸುತ್ತಾ ಒಂದು ಸಂದರ್ಭದಲ್ಲಿ ಹಝ್‌ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಒಂದು ಹದೀಸಿನಲ್ಲಿ ಹೀಗೆ ವರದಿ ಆಗಿದೆ ಖಿಯಾಮತ್ ದಿವಸ ಅಲ್ಲಾಹನು ಕೆಲವು ದಾಸರಿಗೆ ಹೇಳುವನು ನೀವು ಬಹಳ ಗೌರವಾನ್ವಿತ ವ್ಯಕ್ತಿ ಆಗಿದ್ದೀರಿ ನಾನು ನಿಮ್ಮಿಂದ ಬಹಳ ಸಂತೋಷಗೊಂಡಿದ್ದೇನೆ ಏಕೆಂದರೆ ನನಗೆ ಬಹಳ ಹಸಿವಾದಾಗ ನೀನು ನನ್ನನ್ನು ಊಟ ಉಣಿಸಿದೆ. ನಾನು ನಗ್ನನಾಗಿದ್ದೇ ನೀನು ನನಗೆ ಉಡುಪು ಧರಿಸಿದೆ. ನನಗೆ ದಾಹವಾಗಿತ್ತು ನೀನು ನನ್ನನ್ನು ನೀರುಣಿಸಿದೆ. ನಾನು ಅನಾರೋಗ್ಯನಾಗಿದ್ದೆ ನೀನು ನನ್ನನ್ನು ಆರೈಕೆ ಮಾಡಿದೆ. ಅವರು ಹೇಳುವರು ಯಾ ಅಲ್ಲಾಹ್!! ನೀನು ಈ ವಿಷಯಗಳಿಂದ ಶುದ್ಧವಾಗಿದ್ದೀಯ. ನಿನಗೆ ಯಾವಾಗ ಈ ಪರಿಸ್ಥಿತಿ ಉಂಟಾಯಿತು ನಾವು ನಿನ್ನೊಂದಿಗೆ ಹೀಗೆ ವರ್ಥಿಸಬೇಕಾಯಿತು? ಆಗ ಅಲ್ಲಾಹನು ಹೇಳುವನು ನನ್ನ ಆ ದಾಸರು ಹೀಗಿದ್ದರು ನೀನು ಅವರ ಬಗ್ಗೆ ಚಿಂತಿಸಿದ. ಅದು ಎಂತಹ ವಿಷಯವಾಗಿತ್ತು ಎಂದರೆ ನೀವು ನನಗೆ ಹಾಗೆ ಮಾಡಿದ ಹಾಗಿತ್ತು. ಮತ್ತೆ ಇನ್ನೊಂದು ಗುಂಪು ಮುಂದಾಗುವುದು. ನೀವೆಲ್ಲರು ನನ್ನೊಂದಿಗೆ ಕೆಟ್ಟದಾಗಿ ವರ್ತಿಸಿದ್ದೀರಿ. ನನಗೆ ಹಸಿವಾದಾಗ ನೀವು ನನ್ನನ್ನು ಉಣಿಸಲಿಲ್ಲ. ನನಗೆ ದಾಹವಾದಾಗ ನೀವು ನನ್ನ ದಾಹವನ್ನು ದೂರಗೊಳಿಸಲಿಲ್ಲ. ನಗ್ನನಾಗಿದ್ದೇ ನನಗೆ ಬಟ್ಟೆ ಧರಿಸಲಿಲ್ಲ. ನಾನು ಅನಾರೋಗ್ಯನಾಗಿದ್ದೆ ನೀವು ನನ್ನ ಆರೈಕೆ ಮಾಡಲಿಲ್ಲ. ಆಗ ಅವರೆಲ್ಲರು ಹೇಳುವರು ಯಾ ಅಲ್ಲಾಹ್!! ನೀನು ಈ ಎಲ್ಲಾ ವಿಷಯಗಳಿಂದ ಶುದ್ಧವಾಗಿದ್ದೀಯ. ನಿನಗೆ ಯಾವಾಗ ಇಂತಹ ಪರಿಸ್ಥಿತಿ ಉಂಟಾಯಿತು? ಅದಕ್ಕೆ ಅಲ್ಲಾಹನು ಉತ್ತರಿಸುವನು ನನ್ನ ಆ ಆ ದಾಸರ ಪರಿಸ್ಥಿತಿ ಹೀಗಾಗಿತ್ತು. ಅವರೊಂದಿಗೆ ನೀನು ಸಹಾನುಭೂತಿ ತೋರಿಸಿದ್ದರೆ ಅದು ನನ್ನೊಂದಿಗೆ ತೋರಿದ ಹಾಗಿತ್ತು."

ಇಲ್ಲಿ ಯಾವ ಶರತ್ತು ಇಲ್ಲ ಮುಸ್ಲಿಮರೋ ಅಥವಾ ಹಿಂದು ಆಗಿದ್ದಾನೋ ಅಥವಾ ಕ್ರೈಸ್ತನೋ ಅಥವಾ ಯಾರು ಎಂದು ಹೇಳುತ್ತಾರೆ: "ಆದ್ದರಿಂದ ಎಲ್ಲಾ ಮನುಷ್ಯರ ಮೇಲೆ ದಯೇ ಹಾಗೂ ಸಹಾನುಭೂತಿ ತೋರುವುದು ಬಹಳ ದೊಡ್ಡ ಆರಾಧನೆ ಆಗಿದೆ ಮತ್ತು ಅಲ್ಲಾಹನ ಒಪ್ಪಿಗೆ ಪಡೆಯಲು ಇದೊಂದು ಉತ್ತಮವಾದ ಮಾರ್ಗವಾಗಿದೆ ಆದರೆ ನಾನು ನೋಡುವುದೇನೆಂದರೆ ಇದರಲ್ಲಿ ಬಹಳ ದೌಬಲ್ಯವನ್ನು ವ್ಯಕ್ತ ಪಡಿಸುತ್ತಾರೆ. ಅನ್ಯರನ್ನು ಬಹಳ ಕೀಳಾಗಿ ನೋಡುತ್ತಾರೆ. ಅವರನ್ನು ಅವಮಾನಿಸುತ್ತಾರೆ. ಅವರ ಬಗ್ಗೆ ಕಾಳಜಿವಹಿಸುವುದು ಮತ್ತು ಯಾರೊಬ್ಬರ ಸಂಕಷ್ಟವನ್ನು ದೂರಗೊಳಿಸುವುದು ಅವರನ್ನು ಸಹಾಯ ಮಾಡುವುದು ದೊಡ್ಡ ವಿಷಯವಾಗಿದೆ. ಯಾರು ಬಡವರೊಂದಿಗೆ ಉತ್ತಮವಾಗಿ ವರ್ತಿಸುವುದಿಲ್ಲವೋ ಬದಲಿಗೆ ಕೀಳಾಗಿ ಭಾವಿಸುತ್ತಾರೋ, ನನಗೆ ಭಯವಾಗುವುದೇನೆಂದರೆ ಅವರೇ ಈ ಸಂಕಷ್ಟದಲ್ಲಿ ಸಿಲುಕದಿರಲಿ ಎಂದು. ಅಲ್ಲಾಹನು ಯಾರ ಮೇಲೆ ದಯೇ ತೋರಿದ್ದಾನೊ ಅವರ ಕೃತಜ್ಞತೆ ಇದೇ ಆಗಿದೆ ಅಂದರೆ ಅಲ್ಲಾಹನ ಸೃಷ್ಟಿಯೊಂದಿಗೆ ಉಪಕಾರದೊಂದಿಗೆ ವರ್ತಿಸುವುದಾಗಿದೆ. ಅಲ್ಲಾಹನು ಕರುಣಿಸಿದರ ಮೇಲೆ ಜಂಬ ಪಡಬೇಡಿರಿ ಮತ್ತು ಮೃಗಗಳ ಹಾಗೆ ಬಡವರನ್ನು ತುಳಿತಕ್ಕೆ ಒಳಪಡಿಸಬೇಡಿರಿ." (ಮಲ್‌ಫೂಝಾತ್, ಸಂಪುಟ–8, ಪುಟ–102–103, ಮುದ್ರಣ 1984)

ಮತ್ತೆ ಇದರ ಬಗ್ಗೆ ವಿವರಿಸುತ್ತಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ವಾಸ್ತವವೇನೆಂದರೆ ಎಲ್ಲದಕ್ಕು ಕಷ್ಟದಾಯಕವಾದ ವಿಷಯವೇನೆಂದರೆ ಹುಖೂಖುಲ್ ಇಬಾದ್ ಆಗಿದೆ ಏಕೆಂದರೆ ಪ್ರತಿಕ್ಷಣ ಈ ಸನ್ನಿವೇಶವು ಉದ್ಭವವಾಗುತ್ತದೆ ಮತ್ತು ಯಾವಾಗಲು ಈ ಸಂಕಷ್ಟ ಎದುರಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ಬಹಳ ಚಾತುರ್ಯದಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ನನ್ನ ಧರ್ಮ ಏನಾಗಿದೆ ಎಂದರೆ ಶತ್ರುವಿನೊಂದಿಗೆಯು ತೀವ್ರವಾಗಿ ವರ್ತಿಸಬಾರದು. ಕೆಲವರು ಎಲ್ಲಿಯ ತನಕ ಸಾಧ್ಯವೋ ಅಲ್ಲಿಯ ತನಕ ಅವರನ್ನು ಹಾನಿ ಉಂಟು ಮಾಡಲು ಪ್ರಯತ್ನಿಸಬೇಕು ಎಂದು ಪ್ರಯತ್ನಿಸುತ್ತಾರೆ. ಅವರೆಲ್ಲರು ಇಂತಹ ಯೋಚನೆಗಳಲ್ಲಿ ತೊಡಗಿ ಧರ್ಮಬದ್ಧ ಹಾಗೂ ಅಧರ್ಮಬದ್ಧ ಯಾವುದು ಎಂದೂ ಸಹ ಪರಿಗಣಿಸುವುದಿಲ್ಲ. ಅವರನ್ನು ಅವಮಾನಿಸುವುದಕ್ಕೆ ಅವರ ಮೇಲೆ ಸುಳ್ಳು ಅಪವಾದವನ್ನು ಮಾಡುತ್ತಾರೆ. ಸುಳ್ಳು ಕೃತ್ಯ ಎಸಗುತ್ತಾರೆ ಮತ್ತು ಹಿಂದಿನಿಂದ ದೋಷಿಸುತ್ತಾರೆ ಮತ್ತು ಅನ್ಯರನ್ನು ಅವರ ವಿರುದ್ಧ ಉತ್ತೇಜಿಸುತ್ತಾರೆ. ಈಗ ಹೇಳಿರಿ ಒಂದು ಚಿಕ್ಕ ಶತ್ರುತ್ವದಿಂದ ಎಷ್ಟರ ಮಟ್ಟಿಗೆ ಕೆಡುಕಿನ ವಾರಿಸುದಾರನಾದನು ಎಂದು ಮತ್ತು ಈ ಕೆಡುಕುಗಳು ವಕ್ಕರಿಸಿದರೆ ಎಲ್ಲಿಯ ತನಕ ಇದು ತಲುಪುವುದು."

ಇಂದು ನಾವು ನೋಡುತ್ತಲೇ ಇದ್ದೇವೆ ಲೋಕದ ಪರಿಸ್ಥಿತಿಯು ಹೀಗೇ ಆಗಿದೆ. ಏಕಾಂಗಿಯಾಗಿಯು ಮತ್ತು ಗುಂಪಿನಲ್ಲಿಯೂ ಅದೇ ರೀತಿ ಖೌಮಿನ ಹಾಗೂ ಸರಕಾರದ ರೂಪದಲ್ಲಿಯು. ಹೇಳುತ್ತಾರೆ "ವಾಸ್ತವವಾಗಿಯು ನಾನು ಹೇಳುವುದೇನೆಂದರೆ ನೀವು ಯಾರನ್ನು ತನ್ನ ಶತ್ರು ಎಂದು ಪರಿಗಣಿಸಬೇಡಿರಿ ಮತ್ತು ಈ ವೈರತ್ವವನ್ನು ತ್ಯಜಿಸಿರಿ. ಅಲ್ಲಾಹನು ನಿಮ್ಮೊಂದಿಗಿದ್ದರೆ ಮತ್ತು ನೀವು ಅಲ್ಲಾಹನೊಂದಿಗೆ ಸೇರಿದರೆ ಅಲ್ಲಾಹನು ಶತ್ರುಗಳನ್ನು ಸಹ ನಿಮ್ಮ ಸೇವಕರಲ್ಲಿ ಸೇರಿಸಲು ಬಯಸಬಹುದು ಆದರೆ ನೀವು ಅಲ್ಲಾಹನೊಂದಿಗೆ ಸಂಬಂಧ ಇರಿಸದಿದ್ದರೆ ಮತ್ತು ಅವನ ಮರ್ಜಿಯ ವಿರುದ್ಧ ನೀವು ನಡೆದುಕೊಂಡರೆ ಅಲ್ಲಾಹನಿಗಿಂತ ದೊಡ್ಡ ವೈರಿ ಯಾರಾಗಿರುವರು? ಸೃಷ್ಟಿಯ ವೈರತ್ವದಿಂದ ಮನುಷ್ಯ ಉಳಿಯ ಬಹುದು ಆದರೆ ಅಲ್ಲಾಹನು ವೈರಿ ಆದರೆ ಇಡೀ ಸೃಷ್ಟಿ ನಿಮ್ಮ ಸ್ನೇಹಿತರಾಗಿದ್ದರೂ ಏನು ಆಗುವುದಿಲ್ಲ. ಆದ್ದರಿಂದ ನಿಮ್ಮ ಶೈಲಿಯು ಪ್ರವಾದಿಗಳ ಶೈಲಿ ಆಗಿರಬೇಕು. ಅಲ್ಲಾಹನ ಇರಾದೆಯು ಕೇವಲ ಯಾರ ವೈಯುಕ್ತಿಕ ವೈರಿಗಳು ಇರಬಾರದು ಎಂದಾಗಿದೆ.

ನೆನಪಿಡಿರಿ! ಒರ್ವ ಮನುಷ್ಯನಗೆ ಗೌರವ ಯಾವಾಗ ದೊರೆಯುತ್ತದೆ ಎಂದರೆ ಎಲ್ಲಿಯ ತನಕ ಆತನ ವೈಯುಕ್ತಿಕ ವೈರಿ ಇರುವುದಿಲ್ಲವೋ. ಅಲ್ಲಾಹ್ ಮತ್ತು ಅವನ ಸಂದೇಶವಾಹಕನ ಗೌರವಕ್ಕಾಗಿ ಬೇರೆ ವಿಷಯವಿದೆ ಅಂದರೆ ಯಾರು ಅಲ್ಲಾಹನನ್ನು ಹಾಗೂ ಅವನ ಸಂದೇಶವಾಹಕನನ್ನು ಗೌರವಿಸುವುದಿಲ್ಲವೋ ಬದಲಿಗೆ ಅವರ ವೈರಿಯಾಗಿದ್ದಾನೋ ಆತನನ್ನು ತನ್ನ ವೈರಿ ಎಂದು ಪರಿಗಣಿಸಿರಿ." ಆದರೆ ಈ ವೈರತ್ವದ ಬಗ್ಗೆ ಹೀಗೆ ವಿವರಿಸಿದರು. "ಈ ವೈರತ್ವದಿಂದ ಹೀಗೆ ತಿಳಿದುಕೊಳ್ಳಬಾರದು ಎಂದರೆ ನೀವು ಅವರ ಮೇಲೆ ಸುಳ್ಳು ಅಪವಾದ ಹೊರಿಸಿ ಆತನನ್ನು ಕಾರಣವಿಲ್ಲದೆ ದುಃಖ ನೀಡಲು ಪ್ರಯತ್ನಿಸಿದಿರಿ. ಇಲ್ಲ, ಬದಲಿಗೆ ಅವನಿಂದ ದೂರವಾಗಿ ಅಲ್ಲಾಹನಿಗೆ ಈ ವಿಷಯವನ್ನು ಅರ್ಪಿಸಿರಿ. ಸಾಧ್ಯವಾದರೆ ಆತನ ಒಳಿತಿಗಾಗಿ ದುಆ ಮಾಡಿರಿ. ತನ್ನ ಕಡೆಯಿಂದ ಯಾವ ಹೊಸ ವಿಷಯ ಪ್ರಾರಂಭಿಸಬೇಡಿರಿ."

(ಮಲ್‌ಫೂಝಾತ್ ಸಂಪುಟ–8, ಪುಟ–104–105, ಮುದ್ರಣ 1984)

ಮತ್ತೆ ನೈತಿಕ ಮಟ್ಟಗಳ ಬಗ್ಗೆ ಗಮನಹರಿಸುವತ್ತಾ ಹೇಳುತ್ತಾರೆ: "ನೈತಿಕ ಪರಿಸ್ಥಿತಿಯು ಹೇಗೆ ಸರಿಯಾಗಿರಬೇಕೆಂದರೆ ಬೇರೆಯವರಿಗೆ ಒಳ್ಳೆಯ ನಿಯ್ಯತ್ತಿನಂದ ಉಪದೇಶಿಸಬೇಕು ಮತ್ತು ಆತನಿಗೆ ದುಖಃವಾಗದ ಸಮಯದಲ್ಲಿ ಆತನ ತಪ್ಪನ್ನು ಹೇಳಬೇಕು. ಯಾರನ್ನು ಕೀಳಾಗಿ ನೋಡಬೇಡಿರಿ. ಮನಸ್ಸು ಛಿದ್ರಗೊಳಿಸಬೇಡಿರಿ. ಜಮಾಅತ್ತಿನಲ್ಲಿ ಪರಸ್ಪರ ಜಗಳಗಳಾಗಬಾರದು. ಧಾರ್ಮಿಕ ಬಡ ಸಹೋದರರರನ್ನು ಎಂದೂ ಕೀಳಾಗಿ ನೋಡಬೇಡಿರಿ. ಸಂಪತ್ತು ಹಾಗೂ ಕೌಟುಂಬಿಕ ಹಿರಿಮೆಯ ಮೇಲೆ ಎಂದೂ ಅಹಂಕಾರ ಪಟ್ಟು ಅನ್ಯರನ್ನು ಕೀಳಾಗಿ ಭಾವಿಸದಿರಿ. ನಿಮ್ಮ ಪೈಕಿ ಯಾರು ಹೆಚ್ಚು ಸಾತ್ವಿಕರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. ಆದ್ದರಿಂದ ಅಲ್ಲಾಹನು

ಪವಿತ್ರ ಖುರ್‌ಅನಿನಲ್ಲಿ ಹೀಗೆ ಹೇಳುತ್ತಾನೆ: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್ಖಾಕುಮ್**. (ಅಲ್‌ಹುಜರಾತ್:14) ಅನ್ಯರೊಂದಿಗೆ ಸಂಪೂರ್ಣವಾಗಿಯು ನೈತಿಕತೆಯಿಂದ ಕಾರ್ಯನಿರ್ವಹಿಸಬೇಕು. ಯಾರ ವರ್ತನೆ ಕೆಟ್ಟದಾಗಿಲ್ಲವೋ ಆತನು ಸಾತ್ವಿಕನಲ್ಲ. ನಮ್ಮ ಜಮಾಅತ್ತಿನಲ್ಲಿ ಜನರು ಕೇವಲ ಮುಕದ್ದಮೆಗಳನ್ನು ದಾಖಲಿಸಲು ನೆಪಗಳನ್ನು ಹುಡುಕುತ್ತಿರುತ್ತಾರೆ. ಜನರಿಗಾಗಿ ಒಂದು ತಾಊನ್ (ಪ್ಲೇಗ್) ಇದೆ. ನಮ್ಮ ಜಮಾಅತ್ತಿನವರಿಗೆ ಎರಡು ತಾಊನ್ ಇದೆ. ಜಮಾಅತ್ತಿನಲ್ಲಿ ಯಾರಾದರು ಕೆಡುಕನ್ನು ಮಾಡಿದರೆ ಆತನೊರ್ವನಿಂದ ಇಡೀ ಜಮಾತ್ತಿಗೆ ದೋಷ ಬರುವುದು. ತಿಳುವಳಿಕೆ, ಸಹಿಷ್ಣುತೆ ಹಾಗೂ ಕ್ಷಮಿಸುವ ಭಾವನೆಗಳನ್ನು ತಮ್ಮಲ್ಲಿ ಹುಟ್ಟಿಸಿರಿ. ಮೂರ್ಖರಿಂದ ಮೂರ್ಖರ ಪ್ರಶ್ನೆಗೆ ಗಾಂಭೀರ್ಯದಿಂದ ಉತ್ತರಿಸಿರಿ. ಅಸಭ್ಯ ಮಾತುಗಳಿಗೆ ಉತ್ತರ ಅಸಭ್ಯವಲ್ಲ....... ವಾಸ್ತವಿಕವಾಗಿ ಈ ಸಮಸ್ಯೆಗಳ ದಿನಗಳಲ್ಲಿ ತಮ್ಮ ಆತ್ಮವನ್ನು ಕೊಂದು ತಖ್ವಗಳಿಸಿರಿ. ನನ್ನ ಈ ಮಾತುಗಳ ಉದ್ದೇಶ ಕೇವಲ ನೀವೆಲ್ಲರು ಇದರಿಂದ ಪಾಠಕಲಿಯಿರಿ. ಲೋಕ ನಶಿಸಿಹೋಗುವ ಸ್ಥಾನವಾಗಿದೆ, ಕೊನೆಗೆ ಮರಣ ಹೊಂದಬೇಕಾಗಿದೆ. ಸಂತೋಷ ದೀನಿನ ಮಾತುಗಳಲ್ಲಿದೆ. ಮೂಲ ಉದ್ದೇಶ ದೀನ್ ಆಗಿದೆ."

(ಮಲ್‌ಫೂಝಾತ್ ಸಂಪುಟ–1, ಪುಟ–208–209)

ಮತ್ತೊಂದು ಸಂದರ್ಭದಲ್ಲಿ ಜಮಾಅತ್ತನ್ನು ಉಪದೇಶಿಸುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಮ್ಮ ಜಮಾಅತ್ತಿನವರು ಕೇವಲ ಮಾತುಗಳಲ್ಲಿರಬಾರದು ಬದಲಿಗೆ ಬೈಅತ್‌ನ ಮೂಲ ಉದ್ದೇಶಗಳನ್ನು ಗಳಿಸುವವರಾಗಿರಬೇಕು." "ಆ ತಾಂತ್ರಿಕ ಪರಿವರ್ತನೆ ಮಾಡಿಕೊಳ್ಳಬೇಕಾಗುವುದು. ಕೇವಲ ಸಮಸ್ಯೆಗಳಿಂದ ನೀವು ಅಲ್ಲಾಹನನ್ನು ಸಂತೋಷಗೊಳಿಸುವುದಕ್ಕೆ ಸಾಧ್ಯವಿಲ್ಲ." ಅಂದರೆ ಸಮಸ್ಯೆಗಳು ಏನು ಎಂದು ತಿಳಿದುಕೊಂಡರೆ ಹೀಗಾಗುವುದಿಲ್ಲ. ಅಲ್ಲಾಹನು ಇದರಿಂದ ಸಂತೋಷಗೊಳ್ಳುವುದಿಲ್ಲ. "ಆಂತರಿಕ ಪರಿವರ್ತನೆ ಇಲ್ಲದಿದ್ದರೆ ನಿಮಗಾಗಲಿ ಮತ್ತು ಅನ್ಯರಲ್ಲಿ ವ್ಯತ್ಯಾಸವಿಲ್ಲ." ನಿಮ್ಮಲ್ಲಿ ಸುಳ್ಳು, ವಂಚನೆ, ಆಲಸ್ಯ ಇದ್ದಲ್ಲಿ ನೀವು ಅನ್ಯರಿಗಿಂತ ಮೊದಲು ನಶಿಸಿ ಹೋಗುವಿರಿ. ಪ್ರತಿಯೊಬ್ಬರು ತಮ್ಮ ಭಾರವನ್ನು ತಾವೇ ಎತ್ತ ಬೇಕು ಮತ್ತು ತಮ್ಮ ವಾಗ್ದಾನವನ್ನು ಸಂಪೂರ್ಣಗೊಳಿಸಬೇಕು. ವಯಸ್ಸಿನ ಭರವಸೆ ಇಲ್ಲ." ಹೇಳುತ್ತಾರೆ "......ಯಾರು ಸಮಯಕ್ಕಿಂತ ಮುಂಚೆಯೇ ಒಳಿತು ಮಾಡುತ್ತಾನೊ ಆತನು ಶುದ್ಧನಾಗುವನು ಎಂಬ ಭರವಸೆ ಇದೆ. ತಮ್ಮ ಆತ್ಮದ ಪರಿವರ್ತನೆಗಾಗಿ ಶ್ರಮವಹಿಸಿರಿ. ನಮಾಝಿನಲ್ಲಿ ದುಆ ಮಾಡಿರಿ. ಸದಖಗಳನ್ನು ಮತ್ತು ಬೇರೆ ಎಲ್ಲಾ ರೀತಿಯ ನೆಪಗಳಿಂದ **ವಲ್ಲಝೀನ ಜಾಹದು ಫೀನಾ** (ಅಲ್ ಅನ್‌ಕಬೂತ್: 70) ರಲ್ಲಿ ಸೇರಿಸಿಕೊಳ್ಳಿರಿ. ಹೇಗೆ ಓರ್ವ ವ್ಯಕ್ತಿ ವೈದ್ಯನ ಬಳಿ ಹೋಗುತ್ತಾನೋ, ಔಷಧಿ ನುಂಗುತ್ತಾನೊ, ಸುಖವಿರೇಚಕ ಪಡೆಯುತ್ತಾನೊ, ರಕ್ತ ಪರಿಶೀಲಿಸುತ್ತಾನೊ ಮತ್ತೆ ಆರೋಗ್ಯವಂತನಾಗಲು ಪ್ರತಿಯೊಂದು ರೀತಿಯಲ್ಲಿ ಶ್ರಮಿಸುತ್ತಾನೋ ಅದೇ ರೀತಿ ತನ್ನ ಆಧ್ಯಾತ್ಮಿಕ ರೋಗಗಳನ್ನು ನಿವಾರಿಸಿಕೊಳ್ಳಲು ಪ್ರತಿಯೊಂದು ರೀತಿಯಲ್ಲಿ ಶ್ರಮವಹಿಸಿರಿ. ಕೇವಲ ನಾಲಿಗೆ ಹೇಳುವುದಲ್ಲ ಬದಲಿಗೆ ಎಷ್ಟರ ಮಟ್ಟಿಗೆ ಶ್ರಮವಹಿಸಲು ಅಲ್ಲಾಹನು ಉಪದೇಶಿಸಿದ್ದಾನೋ ಅಷ್ಟು ಶ್ರಮವಹಿಸಿರಿ. ಕಾಡಿಗೆ ಹೋಗಿ ದುಆ ಮಾಡಿರಿ." ಹೇಳಿದರು "......ಅಲ್ಲಾಹನು ನೆಪ ಮಾಡುವವರನ್ನು ಇಷ್ಟಪಡುವುದಿಲ್ಲ. ಮನುಷ್ಯ ಎಲ್ಲಾ ರೀತಿಯ ನೆಪಗಳನ್ನು ಉಪಯೋಗಿಸಿದರು ಆತನು ಯಾವುದಾದರು ಕುರುಹುವಿಗೆ ಸಿಲುಕುತ್ತಾನೆ." (ಮಲ್‌ಫೂಝಾತ್ ಸಂಪುಟ–8, ಪುಟ–188–189, 1984ರ ಮುದ್ರಣ)

ಅಂದರೆ ಕುರುಹು ಸಹ ಆಗುವನು. ಹೀಗಾಗಿ ಈ ದಿನಗಳಲ್ಲಿ ವಿಶೇಶವಾಗಿ ಪಾಕಿಸ್ತಾನದಲ್ಲಿ ಮತ್ತೆ ಕೆಲವು ರಾಷ್ಟ್ರಗಳಲ್ಲಿ ಜಮಾಅತ್ತಿನ ವಿರೋಧವು ಉಕ್ಕುತ್ತಿದೆ. ನಮಗೆ ಅಲ್ಲಾಹನ ಅನುಗ್ರಹಗಳಿಸಲು ಪ್ರತಿಯೊಂದು ರೀತಿಯಲ್ಲಿ ನೆಪಗಳನ್ನು ಅನುಸರಿಸಲು ಪ್ರಯತ್ನಿಸಬೇಕಾಗಿದೆ. ವೈರಿ ತನ್ನ ವೈರತ್ವದಲ್ಲಿ ಹೆಚ್ಚಾಗಿದ್ದಲ್ಲಿ ನಾವು ಅಲ್ಲಾಹನ ಅನುಗ್ರಹವನ್ನು ಪಡೆಯಲು ಮೊದಲಿಗಿಂತಲು ಹೆಚ್ಚಾಗಿ ಶ್ರಮವಹಿಸಬೇಕಾಗಿದೆ.

ಅದೇ ರೀತಿ ಈ ಕಾಲದಲ್ಲಿ ಪ್ರವಾದಿ ಮುಹಮ್ಮದ್(ಸ) ಅವರ ಸ್ಥಾನ ಹಾಗೂ ಅವರ ಮಾದರಿಯ ಸತ್ಯತೆಯನ್ನು ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಪಷ್ಟಿಸಿದ್ದಾರೆ. ಈ ಎಲ್ಲಾ ವಿಷಯಗಳು ಈ ಉತ್ತಮ ಸದ್ಗುಣಗಳು, ಹಖುಕುಲ್ಲಾಹ್ ಮತ್ತು ಹುಖೂಕುಲ್ ಇಬಾದ್ ಅನ್ನು ಈಡೇರಿಸುವುದು ಇವೆಲ್ಲವೂ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಮಾದರಿಯನ್ನು ಅನುಸರಿಸಿಯೇ ಗಳಿಸಲು ಸಾಧ್ಯ. ನಮಗೆ ಪದೇ ಪದೇ ಹೇಳುವುದೇನೆಂದರೆ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಮಾರ್ಗವನ್ನು ತ್ಯಜಿಸಬೇಡಿ. ಇದರ ಬಗ್ಗೆ ಉಪದೇಶಿಸುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ನಾನು ಸ್ಪಷ್ಟಪಡಿಸುವುದೇನೆಂದರೆ ಅನೇಕ ಜನರು ತಾವು ಸೃಷ್ಟಿಸಿರುವ ನಿತ್ಯಕರ್ಮಗಳ ಮುಖಾಂತರ ಶ್ರೇಷ್ಠತೆಗಳಿಸಲು ಪ್ರಯತ್ನಿಸುತ್ತಾರೆ ಅಥವಾ ಅಲ್ಲಾಹನಿಂದ ಸಂಬಂಧ ಹೊಂದಲು ಬಯಸುತ್ತಾರೆ. ಆದರೆ ನಾನು ಹೇಳುವುದೇನಂದರೆ. ಯಾವ ಮಾರ್ಗ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅನುಸರಿಸಿರಲಿಲ್ಲವೋ ಅದನ್ನು ಅನುಸರಿಸುವುದು ವ್ಯರ್ಥವಾಗಿದೆ. ಪ್ರವಾದಿ(ಸ) ಅವರಿಗಿಂತ ಹೆಚ್ಚು ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದ ಅನುಭಾವ ವ್ಯಕ್ತಿ ಯಾರಾದರು ಇದ್ದಾರೆಯೇ. ನುಬುವ್ವತ್‌ನ ಎಲ್ಲಾ ಶ್ರೇಷ್ಠತೆಗಳನ್ನು ಮುಗಿಸಲಾಗಿರುವವರು ಯಾರಾದರು ಇದ್ದಾರೆಯೇ. ಹುಝೂರ್(ಸ) ಅವರು ಅನುಸರಿಸಿರುವ ಮಾರ್ಗವು ಸ್ಪಷ್ಟ ಹಾಗೂ ಸರಿಯಾಗಿತ್ತು. ಆ ಮಾರ್ಗವನ್ನು ತ್ಯಜಿಸಿ ಬೇರೆ ಮಾರ್ಗವನ್ನು ಅನುಸರಿಸುವುದು ನನ್ನ ಪ್ರಕಾರ ನಾಶವಾಗಿದೆ. ಅಲ್ಲಾಹನು ನನ್ನ ಮೇಲೆ ಹೀಗೆ ಪ್ರಕಟಿಸಿದ್ದಾನೆ." (ಮಲ್‌ಫೂಝಾತ್ ಸಂಪುಟ–1, ಪುಟ–355, 1984ರ ಮುದ್ರಣ)

ನಮಗೆ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರಿಂದ ಬೇರ್ಪಡಿಸುವವರ ಪರಿಸ್ಥಿತಿಯು ಹೀಗೆ ಕಾಣಿಸುತ್ತದೆ ಅಂದರೆ ಪೀರ್‌ಗಳು ಹಾಗೂ ಕಪಟ ವಿದ್ವಾಂಸರ ತಪ್ಪು ವರ್ಣನೆಗಳಿಂದ ಇಸ್ಲಾಮ್ ಧರ್ಮದ ಬೋಧನೆಗಳು ಛಿದ್ರಿಯಾಗಿದೆ. ಹೀಗಿದ್ದರು ಅವರೆಲ್ಲರು ನೈಜ್ಯ ಮುಸ್ಲಿಮರು ಎಂದು ಹೇಳುತ್ತಾರೆ ಮತ್ತು ನಮಗೆ ಇಸ್ಲಾಮ್‌ನಿಂದ ತೇರ್ಗಡೆ ಮಾಡುತ್ತಾರೆ. ಪ್ರವಾದಿ(ಸ) ರ ಉತ್ತುಂಗ ಸ್ಥಾನವನ್ನು ಸ್ಪಷ್ಟಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ: "ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ನೈಜ್ಯವಾದ ಅನುಸರಣೆ ಅಲ್ಲಾಹನೆಡೆ ತಲುಪಿಸುತ್ತದೆ. ಮತ್ತು ಇವರ ಅನುಸರಣೆಯನ್ನು ತ್ಯಜಿಸಿ ಇಡೀ ಜೀವನ ನಮಾಝ್ ಮಾಡಿದರೂ ಮೂಲ ಉದ್ದೇಶಕ್ಕೆ ಆತನು ತಲುಪಲು ಸಾಧ್ಯವಿಲ್ಲ. ಹೀಗಾಗಿ ಸಅದಿ ಸಹ ಪ್ರವಾದಿ(ಸ) ರ ಅನುಸರಣೆಯ ಬಗ್ಗೆ ಹೀಗೆ ಹೇಳುತ್ತಾನೆ. "ಫಾರ್ಸಿ ಭಾಷೆಯಲ್ಲಿದೆ.

**"ಬಝುಹ್ದೊ ವರಅ ಕೂಷ್ ವ ಸಿದ್ಖೊ ಸಫಾವಲಿಕನ್ ಮೈಫಝಾ ಎ ಬರ್ ಮುಸ್ತಫಾ"**

(ಅಂದರೆ ತಖ್ವ, ಸತ್ಯತೆಗಾಗಿ ಅವಶ್ಯಕವಾಗಿ ಪ್ರಯತ್ನಿಸಿರಿ ಆದರೆ ಪ್ರವಾದಿ(ಸ) ರು ತೋರಿಕೊಟ್ಟ ಮಾರ್ಗವನ್ನು ತ್ಯಜಿಸದಿರಿ) "ಪ್ರವದಿ(ಸ) ಅವರ ಮಾರ್ಗವನ್ನು ತ್ಯಜಿಸದಿರಿ. ನಾನು ನೋಡುವುದೇನೆಂದರೆ ಭಿನ್ನ ಭಿನ್ನವಾದ ಕಾರ್ಯಗಳು ಮಾಡುತ್ತಾರೆ ವಿಭಿನ್ನ ರೀತಿಯಲ್ಲಿ ನೇತಾಡುತ್ತಾರೆ, ಜೋಗಿಗಳ ರೀತಿಯಲ್ಲಿ ಜಿವನ ಸಾಗಿಸುತ್ತಾರೆ ಆದರೆ ಇವೆಲ್ಲವೂ ವ್ಯರ್ಥವಾಗಿದೆ. ಪ್ರವಾದಿಗಳು ವಿಭನ್ನ ರೀತಿಯಲ್ಲಿ ನೇತಾಡಲಿಲ್ಲ ಅಥವಾ ಕಾರ್ಯಗಳು ಮಾಡಲಿಲ್ಲ. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಉಸ್ವಾ ಎ ಹಸನ (ಉತ್ತಮ ಜೀವನ ಶೈಲಿ) ಎಂದು ಹೇಳಿರುವುದು." **"ಲಕುಮ್ ಫೂಈ ರಸೂಲಿಲ್ಲಾಹಿ ಉಸ್ವತುನ್ ಹಸನ"** (ಅಲ್‌ಅಹ್‌ಝಾಬ್:22) ಅಂದರೆ: ನಿಮಗಾಗಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಲ್ಲಿ ಉತ್ತಮ ಮಾರ್ಗದರ್ಶನವಿದೆ. ಹೇಳುತ್ತಾರೆ "ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅನುಸರಿಸಿರಿ ಅದಕ್ಕಿಂತ ಸ್ವಲ್ಪವೂ ಅಲ್ಲಗೆಳಯಬೇಡಿರಿ." (ಮಲ್‌ಫೂಝಾತ್ ಸಂಪುಟ–1, ಪುಟ–356, 1984ರ ಮುದ್ರಣ)

"ಹೀಗಾಗಿ ಅನುಗ್ರಹಕ್ಕೆ ಪಾತ್ರರಾಗಿರುವ ಜನರಲ್ಲಿರುವ ಶ್ರೇಷ್ಠತೆಯು ಮತ್ತು **ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಮ್** (ಅಲ್‌ಫಾತಿಹ:7) ರಲ್ಲಿ ಅಲ್ಲಾಹು ಉಪದೇಶಿಸಿರುವುದನ್ನು ಗಳಿಸುವುದು ಪ್ರತಿಯೊಂದು ಮನುಷ್ಯನ ಮೂಲ ಉದ್ದೇಶವಾಗಿದೆ. ನಮ್ಮ ಜಮಾಅತ್ತಿನವರಿಗೆ ಇದರ ಕಡೆ ವಿಶೇಶವಾಗಿ ಗಮನಹರಿಸಬೇಕಾಗಿದೆ ಏಕೆಂದರೆ ಅಲ್ಲಾಹನು ಈ ಜಮಾಅತ್ತನ್ನು ಖಾಯಮ್‌ಗೊಳಿಸುವ ಮೂಲ ಉದ್ದೇಶವೇನೆಂದರೆ ಅಲ್ಲಾಹನು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಿದ್ಧಪಡಿಸಿದ ಜಮಾಅತ್ತಿನ ರೀತಿಯಲ್ಲಿ ಈ ಜಮಾಅತ್ತನ್ನು ಸಹ ಸಿದ್ಧಗೊಳಿಸಬೇಕು. ಇದರಿಂದ ಈ ಕೊನೆ ಕಾಲಘಟ್ಟದಲ್ಲಿ ಈ ಜಮಾಅತ್ ಪವಿತ್ರ ಖುರ್‌ಆನ್ ಹಾಗೂ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಸತ್ಯತೆ ಹಾಗೂ ಶ್ರೇಷ್ಠತೆಯ ಮೇಲೆ ಸಾಕ್ಷಿಯಾಗಿ ನಿಲ್ಲಲಿ ಎಂದಾಗಿದೆ." (ಮಲ್‌ಫೂಝಾತ್ ಸಂಪುಟ–1, ಪುಟ–356, 1984ರ ಮುದ್ರಣ)

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೈಅತ್ ಸ್ವೀಕರಿಸಿ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ನೈಜ್ಯ ಅನುಯಾಯಿಗಳಲ್ಲಿ ಸೇರಿದ್ದೇವೆ. ನಾವು ಬದುಕಿ ಬಾಳಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ದಾಸನ ಬೈಅತ್ ಮಾಡಿ ನಾವು ಅವರ ನೈಜ ಅನುಯಾಯಿಗಳಲ್ಲಿ ಸೇರಿದವರಾಗಬೇಕು. ಮತ್ತು ರಸೂಲುಲ್ಲಾಹ್(ಸ) ರ ಜೀವನ ಶೈಲಿಯನ್ನು ತಮ್ಮ ಎಲ್ಲಾ ಸಾಮರ್ಥ್ಯಕ್ಕನುಗುಣವಾಗಿ ಅನುಸರಿಸಬೇಕು. ನಾವು ನಮ್ಮ ನಮಾಝ್‌ಗಳಲ್ಲಿ ವಿಶಿಷ್ಟ ಅಭಿರುಚಿ ಸೃಷ್ಟಿಸುವವರಾಗಬೇಕು. ನಾವು ಯಾವಾಗಲೂ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಪಾಲಿಸುತ್ತಾ ಜೀವಿಸುವವರಾಗಬೇಕು.

ಅಸೀರಾನೆ ರಾಹೆ ಮೌಲಾರಿಗೋಸ್ಕರ ಸಹ ಪ್ರಾರ್ಥಿಸಿರಿ. ಅಸೀರಾನ್‌ರಲ್ಲಿ ಕೆಲವರಿಗೆ ಬಹಳ ಕಠಿಣವಾದ ಶಿಕ್ಷೆ ನೀಡಿದ್ದಾರೆ ಅವರಿಗಾಗಿ ವಿಶೇಶವಾಗಿ ದುಆ ಮಾಡಿರಿ. ಕಳೆದ ಕೆಳವು ದಿನಗಳ ಹಿಂದೆ ಓರ್ವ ಅಹ್ಮದಿ ಮಹಿಳೆಯನ್ನು

ರಮುರ್ಷಾನ್ ಬೀ ಬೀ ಸಾಹಿಬ ಎಂಬವರಿಗೆ ತೌಹೀನೆ ರಿಸಾಲತ್ (ಪ್ರವಾದಿತ್ವವನ್ನು ಅವಮಾನಿಸುವುದು) ಎಂಬ ಆರ್ಟಿಕಲ್ ಮೆರೆಗೆ ಜೈಲಿಗೆ ಕಳುಹಿಸಲಾಗಿದೆ. ಆ ಮಹಿಳೆ ಸುಮಾರು 2002ರಲ್ಲಿ ಬೈಅತ್ ಮಾಡಿದ್ದರು. ಅವರ ಪತಿ ನನಗೆ ಬರೆದರು ನಾವು ಬಲಿದಾನಕ್ಕೆ ಹೆದರುವವರಲ್ಲ ಮತ್ತು ಜೈಲಿಗೆ ಹೋಗುವುದಕ್ಕು ದುಃಖವಿಲ್ಲ. ನನ್ನ ಪತ್ನಿ ಮತ್ತು ನನಗೆ ದುಃಖವಾಗಿರುವುದೇಕೆಂದರೆ ಯಾವ ಪ್ರವಾದಿ(ಸ) ಅವರ ಗೌರವಕ್ಕಾಗಿ ನಾವು ಜೀವ ಅರ್ಪಿಸಲಿಕ್ಕಾಗಿ ಸಿದ್ಧವಾಗಿದ್ದೇವೆಯೋ ಅವರನ್ನು ಅವಮಾನಿಸಿದ್ದಾರೆ ಎಂದು ನಮ್ಮ ಮೇಲೆ ಆಕ್ಷೇಪಿಸಿದ್ದಾರೆ. ಇದು ದುಃಖಕರವಾದ ಸಂಗತಿ ಆಗಿದೆ. ಹೀಗಾಗಿ ಇವರನ್ನು ಮತ್ತು ಇಂತಹ ಆಕ್ಷೇಪಣೆಯಲ್ಲಿ ಜೀವಾವಧಿ ಶೀಕ್ಷೆ ಅನುಭವಿಸುತ್ತಿರುವ ಎಲ್ಲಾ ಅಸೀರಾನೆ ರಾಹೆ ಮೌಲಾಗೋಸ್ಕರ ದುಆ ಮಡಿರಿ. ಅಲ್ಲಾಹನು ಎಲ್ಲರನ್ನು ಚಮತ್ಕಾರದಿಂದ ಬಿಡುಗಡೆ ಗೊಳಿಸಲಿ. ನ್ಯಾಯಾಲಯ ಮತ್ತು ಸರಕಾರಕ್ಕೆ ಅಲ್ಲಾಹನು ನ್ಯಾಯಪಾಲನೆ ಮಾಡುವ ಸೌಭಾಗ್ಯ ನೀಡಲಿ. ಅಲ್ಲಾಹ್ ಹಾಗೂ ಅಲ್ಲಾಹನ ಸಂದೇಶವಾಹಕನ ಹೆಸರು ಸ್ಮರಿಸುವವರಾಗಿದ್ದರೆ ಅಲ್ಲಾಹ್ ಹಾಗೂ ಅಲ್ಲಾಹನ ಸಂದೇಶವಾಹಕನ ಭಯ ನಿಜವಾಗಿ ಅವರ ಮನಸ್ಸಿನಲ್ಲಿ ಹುಟ್ಟಲಿ. ಪ್ರವಾದಿ(ಸ) ಜೀವನ ಕ್ರಮವನ್ನು ಅನುಸರಿಸುವವರಾಗಿರಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವನ್ನು ಗುರುತಿಸಿಕೊಳ್ಳಲು ನಮ್ಮಲ್ಲಿ ಪ್ರತಿಯೊಬ್ಬರಿಗೆ ಅಲ್ಲಾಹನು ಭಾಗ್ಯ ದಯಪಾಲಿಸಲಿ. ಅಲ್ಲಾಹನ ಮತ್ತು ಅವನ ಸಂದೇಶವಾಹಕರಾದ ಖಾತಮುನ್ನಬಿಯ್ಯೀನ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿ ನಮ್ಮ ಇತರ ಎಲ್ಲಾ ಪ್ರೀತಿಗಳ ಮೇಲೆ ಜಯಶಾಲಿಯಾಗಲಿ. ಇಸ್ಲಾಮಿನ ನೈಜ ಉಪದೇಶಗಳನ್ನು ಕರ್ಮರೂಪಕ್ಕೆ ತರುವವರು ನಾವಾಗಲಿ. ನಮ್ಮ ಮನೆಗಳು ಪ್ರೀತಿ ವಾತ್ಸಲ್ಯಗಳ ಮಾದರಿಯಾಗಲಿ. ಎಲ್ಲಾ ವಾಕಿಫೀನೆ ಝಿಂದಗಿಗಳಿಗೋಸ್ಕರ ಸಹ ಪ್ರಾರ್ಥಿಸಿರಿ. ವಾಕಿಫೀನೆ ನೌಗಳಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ಅವರ ಮತ್ತು ಅವರ ತಂದೆ ತಾಯಂದಿರ ಪ್ರತಿಜ್ಞೆ ಈಡೇರಿಸುವ ಭಾಗ್ಯ ನೀಡಲಿ. ಶುಹದಾಗಳಿಗೋಸ್ಕರ ಮತ್ತು ಅವರ ಕುಟುಂಬಗಳಿಗೋಸ್ಕರ ಪ್ರಾರ್ಥಿಸಿರಿ. ಕಷ್ಟವನ್ನು ಅನುಭವಿಸುತ್ತಿರುವ ಎಲ್ಲಾ ಅಹ್ಮದಿಯರಿಗೋಸ್ಕರ ಪ್ರಾರ್ಥಿಸಿರಿ. ಒಬ್ಬರಿನ್ನೊಬ್ಬರಿಗೋಸ್ಕರ ಪ್ರಾರ್ಥಿಸಿರಿ. ತಮ್ಮ ಸ್ವಂತಕ್ಕಾಗಿಯೂ ಪ್ರಾರ್ಥಿಸಿರಿ. ಮಕ್ಕಳಿಗೆ ಉತ್ತಮ ಸಂಬಂಧ ಲಭಿಸಲಿಕ್ಕಾಗಿಯೂ ಪ್ರಾರ್ಥಿಸಿರಿ. ಈ ಪರಿಸ್ಥಿತಿಯಲ್ಲಿ ಮತ್ತು ಇನ್ನು ಮುಂದೆ ಲೋಕದ ಆರ್ಥಿಕ ಸ್ಥಿತಿಯಲ್ಲಿ ಪ್ರತಿಯೊಬ್ಬ ಅಹ್ಮದಿ ಅದರ ಕೆಟ್ಟ ಪ್ರಭಾವಗಳಿಂದ ಸುರಕ್ಷಿತನಾಗಲು ಪ್ರಾರ್ಥಿಸಿರಿ. ಜಮಾಅತಿನ ಕೆಲಸಗಳಲ್ಲಿ ಮತ್ತು ಕಾರ್ಯಯೋಜನೆಗಳಲ್ಲಿ ಯಾವುದೇ ತಡೆಯುಂಟಾಗದಿರಲು ಪ್ರಾರ್ಥಿಸಿರಿ. ಜಮಾಅತಿನ ಅಭಿವೃದ್ಧಿಗೋಸ್ಕರ ಮತ್ತು ಆರ್ಥಿಕ ಬಲಿದಾನ ನೀಡುವವರಿಗೋಸ್ಕರ ಬಹಳ ಪ್ರಾರ್ಥಿಸಿರಿ. ಎಂ.ಟಿ.ಎ.ದ ಉದ್ಯೋಗಿಗಳಿಗೋಸ್ಕರ ಪ್ರಾಥಿಸಿರಿ. ಇಸ್ಲಾಮೀ ಲೋಕಕ್ಕೋಸ್ಕರ ಸಹ ಪ್ರಾರ್ಥಿಸಿರಿ. ಅವರ ಪರಸ್ಪರ ಜಗಳಗಳು ಕೊನೆಗೊಳ್ಳಲಿ. ಅವರು ಶಾಂತಿಯಿಂದ ಜೀವಿಸಲು ಕಲಿಯುವಂತಾಗಲಿ. ಇಸ್ಲಾಮಿನ ಶತ್ರುಗಳ ಕೆಡುಕುಗಳಿಂದ ಅಲ್ಲಾಹನು ಅವರನ್ನು ರಕ್ಷಿಸಲಿ.

ಈಗ ನಾನು ಕೆಲವು ದುಆಗಳನ್ನು ಪಠಿಸುವೆನು. ನೀವು ಆ ದುಆಗಳನ್ನು ನನ್ನೊಂದಿಗೆ ಪುನರಾವರ್ತಿಸಿರಿ.

اَللّٰهُمَّ اِنَّا نَجْعَلُكَ فِيْ نُحُوْرِهِمْ وَنَعُوْذُبِكَ مِنْ شُرُوْرِهِمْ

**ಅಲ್ಲಾಹುಮ್ಮ ಇನ್ನೀ ನಜ್‌ಅಲುಕ ಫೀ ನುಹೂರಿಹಿಮ್ ವ ನಊಧುಬಿಕ ಮಿನ್ ಶುರೂರಿಹಿಮ್–** (ಸನನ್ ಅಬೂದಾವೂದ್, ಕಿತಾಬುಲ್ ವಿತರ್, ಹದೀಸ್–1537) ನಾವು ನಿನ್ನನ್ನು ಅವರ ಎದೆಯ ಮೇಲಿರಿಸುತ್ತೇವೆ. (ಎಂದರೆ ನಿನ್ನ ಭಯ ಅವರ ಹೃದಯದಲ್ಲಿ ತುಂಬಿಸುತ್ತೇವೆ) ನಾವು ಅವರ ಕೆಡುಕುಗಳಿಂದ ನಿನ್ನ ಅಭಯವನ್ನು ಯಾಚಿಸುತ್ತೇವೆ.

لَا اِلٰهَ اِلَّا اللّٰهُ الْعَظِيْمُ الْحَلِيْمُ۔ لَا اِلٰهَ اِلَّا اللّٰهُ رَبُّ الْعَرْشِ الْعَظِيْمِ۔ لَا اِلٰهَ اِلَّا اللّٰهُ رَبُّ السَّمٰوٰتِ وَرَبُّ الْاَرْضِ وَرَبُّ الْعَرْشِ الْكَرِيْمِ۔

**ಲಾ ಇಲಾಹ ಇಲ್ಲಲ್ಲಾಹುಲ್ ಅಝೀಮುಲ್ ಹಲೀಮ್, ಲಾ ಇಲಾಹ ಇಲ್ಲಲ್ಲಾಹು ರಬ್ಬುಲ್ ಅರ್‌ಶಿಲ್ ಅಝೀಮ್. ಲಾ ಇಲಾಹ ಇಲ್ಲಲ್ಲಾಹು ರಬ್ಬುಸ್ಸಮಾವಾತಿ ವ ರಬ್ಬುಲ್ ಅರ್‌ಝಿ ವ ರಬ್ಬುಲ್ ಅರ್‌ಶಿಲ್ ಕರೀಮ್ –**

(ಸಹೀಹ್ ಬುಖಾರಿ ಕಿತಾಬುದ್ದವಾತ್, ಹದೀಸ್–6346)

ಅಲ್ಲಾಹನ ಹೊರತು ಅನ್ಯ ಆರಾಧ್ಯನಿಲ್ಲ. ಅವನು ಬಹಳ ಪ್ರಭಾವಶಾಲಿಯೂ ಸಹಿಷ್ಣುವೂ ಆಗಿದ್ದಾನೆ. ಅಲ್ಲಾಹನ ಹೊರತು ಅನ್ಯ ದೇವನಿಲ್ಲ. ಅವನು ಅರ್‌ಶಿನ ಪ್ರಭುವಾಗಿದ್ದಾನೆ. ಅಲ್ಲಾಹನ ಹೊರತು ಅನ್ಯ ಆರಾಧ್ಯನಿಲ್ಲ ಅವನು ಆಕಾಶಗಳ, ಭೂಮಿಯ ಮತ್ತು ದಿವ್ಯ ಅರ್‌ಶಿನ ಪ್ರಭುವಾಗಿದ್ದಾನೆ.

يَا مُقَلِّبَ الْقُلُوْبِ ثَبِّتْ قَلْبِيْ عَلٰى دِيْنِكَ۔

**ಯಾ ಮುಖಲ್ಲಿಬಲ್ ಖುಲೂಬ್ ಸಬ್ಬಿತ್ ಖಲ್‌ಬೀ ಅಲಾ ದೀನಿಕ –** (ಸನನ್ ಅತ್ತಿರ್ ಮಿಝಿ, ಅಬ್ವಾಬುಲ್ ಖದರ್, ಹದೀಸ್–2140) ಓ ಹೃದಯಗಳನ್ನು ತಿರುಗಿಸುವವನೇ ನನ್ನ ಹೃದಯವನ್ನು ನಿನ್ನ ಧರ್ಮದಲ್ಲಿ ಸ್ಥಿರವಾಗಿ ನೆಲೆನಿಲ್ಲಿಸು.

اَللّٰهُمَّ اِنِّيْ اَسْاَلُكَ الْهُدٰى وَالتُّقٰى وَالْعَفَافَ وَالْغِنٰى۔

**ಅಲ್ಲಾಹುಮ್ಮ ಇನ್ನಿ ಅಸ್‌ಅಲುಕಲ್ ಹುದಾ ವತ್ತುಖಾ ವಲ್ ಅಫಾಫ ವಲ್‌ಗಿನಾ–** (ಸಹೀಹ್ ಮುಸ್‌ಲಿಮ್, ಕಿತಾಬುಝ್ಝಿಕ್ರ್ ವದ್ದುಆ ಹದೀಸ್–2140) ಓ ಅಲ್ಲಾಹ್, ನಾನು ನಿನ್ನಿಂದ ಸನ್ಮಾರ್ಗವನ್ನು, ತಖ್ವವನ್ನು, ಚಾರಿತ್ರ್ಯ ಶುದ್ಧಿಯನ್ನು, ನಿರಾವಲಂಬನೆಯನ್ನು ಬೇಡಿಕೊಳ್ಳುತ್ತೇನೆ.

اَللّٰهُمَّ اِنِّيْ اَعُوْذُ بِكَ مِنْ زَوَالِ نِعْمَتِكَ وَتَحَوُّلِ عَافِيَتِكَ وَفُجَاءَةِ نِقْمَتِكَ وَجَمِيْعِ سُخْطِكَ۔ (صحیح مسلم، کتاب الرقاق، باب اکثر اھل الجنۃ الفقراء ......الخ حدیث 2739)

**ಅಲ್ಲಾಹುಮ್ಮ ಇನ್ನೀ ಅಊಧುಬಿಕ ಮಿನ್ ಝುವಾಲಿ ನಿಅ್‌ಮತಿಕ ವತಹವ್ವುಲಿ ಆಫಿಯತಿಕ ವ ಫಜ್‌ಅತಿ ನಿಖ್‌ಮತಿಕ ವ ಜಮೀಇ ಸುಖ್‌ತಿಕ** – (ಸಹೀಹ್ ಮುಸ್‌ಲಿಮ್ ಕಿತಾಬುರ್‌ರಿಖಾಕ್, ಹದೀಸ್–2739)

ಓ ಅಲ್ಲಾಹ್ ನಿನ್ನ ಅನುಗ್ರಹಗಳು ನಷ್ಟವಾಗುವುದರಿಂದ, ನೀನು ನೀಡಿದ ಸ್ವಾಸ್ಥ್ಯ ನಷ್ಟವಾಗುವುದರಿಂದ, ನೀನು ಅಚಾನಕವಾಗಿ ಶಿಕ್ಷಿಸುವುದರಿಂದ ಮತ್ತು ನೀನು ಕೋಪಗೊಳ್ಳುವ ಎಲ್ಲಾ ಕೃತ್ಯಗಳಿಂದ ನಾನು ನಿನ್ನ ಅಭಯವನ್ನು ಯಾಚಿಸುತ್ತೇನೆ.

رَبَّنَا ظَلَمْنَآ اَنْفُسَنَا وَاِنْ لَّمْ تَغْفِرْ لَنَا وَتَرْحَمْنَا لَنَكُوْنَنَّ مِنَ الْخٰسِرِيْنَ (الاعراف:24)

**ರಬ್ಬನಾ ಝುಲಮ್‌ನಾ ಅನ್‌ಫಿಸನಾ ವ ಇನ್‌ಲಮ್ ತಗ್‌ಫಿರ್‌ಲನಾ ವ ತರ್‌ಹಮ್‌ನಾ ಲನಕೂನನ್ನ ಮಿನಲ್ ಖಾಸಿರೀನ್** (ಅಲ್‌ಅರಾಫ್: 24)

ನಮ್ಮ ಪ್ರಭೂ, ನಾವೇ ನಮ್ಮ ಮೇಲೆ ಅಕ್ರಮವಾಗಿ ವರ್ತಿಸಿದೆವು. ನೀನು ನಮ್ಮನ್ನು ಕ್ಷಮಿಸಿಬಿಟ್ಟು ನಮ್ಮ ಮೇಲೆ ಕರುಣೆ ತೋರಿಸದಿದ್ದರೆ ಖಂಡಿತವಾಗಿ ನಾವು ನಷ್ಟ ಹೊಂದಿದವರಾಗುವೆವು. (7:24).

رَبَّنَا لَا تُزِغْ قُلُوْبَنَا بَعْدَ اِذْ هَدَيْتَنَا وَهَبْ لَنَا مِنْ لَّدُنْكَ رَحْمَةً اِنَّكَ اَنْتَ الْوَهَّابُ

**ರಬ್ಬನಾ ಲಾ ತುಝಿಘ್ ಖುಲೂಬನಾ ಬಅದ ಇಝ್ ಹದೈತನಾ ವ ಹಬ್‌ಲನಾ ಮಿನ್‌ಲದುನ್‌ಕ ರಹ್ಮತನ್ ಇನ್ನಕ ಅನ್ತಲ್ ವಹಾಬ್** (ಆಲಿ ಇಮ್ರಾನ್: 9)

ನಮ್ಮ ಪ್ರಭೂ, ನೀನು ನಮಗೆ ಮಾರ್ಗದರ್ಶನವನ್ನು ನೀಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನು ಅತಿ ದೊಡ್ಡ (ಅನುಗ್ರಹ) ದಾತನಾಗಿರುವೆ. (3:9).

رَبَّنَآ اٰتِنَا فِي الدُّنْيَا حَسَنَةً وَّفِي الْاٰخِرَةِ حَسَنَةً وَّقِنَا عَذَابَ النَّارِ

**ರಬ್ಬನಾ ಆತಿನಾ ಫಿದ್ದುನ್ಯಾ ಹಸನತೌ ವ ಫಿಲ್ ಆಖಿರತಿ ಹಸನತೌ ವ ಖಿನಾ ಅಝಾಬನ್ನಾರ್** (ಅಲ್‌ಬಖರ: 202)

ನಮ್ಮ ಪ್ರಭೂ, ನಮಗೆ ಇಹಲೋಕ ಜೀವನದಲ್ಲಿ ಒಳಿತನ್ನು ಅನುಗ್ರಹಿಸು ಹಾಗೆಯೇ ಪರಲೋಕ ಜೀವನದಲ್ಲಿ ಸಹ ಒಳಿತನ್ನು ದಯಪಾಲಿಸು ಮತ್ತು ನರಕ ಯಾತನೆಯಿಂದ ನಮ್ಮನ್ನು ರಕ್ಷಿಸು. (2:202).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ದುಆ ಹೀಗಿದೆ.

**ಆಯೆ ರಬ್ಬುಲ್ ಆಲಮೀನ್ ಮೈಂ ತೇರೆ ಇಹ್‌ಸಾನೋಂ ಕಾ ಶುಕ್‌ರಿಯ ಅದಾ ನಹೀಂ ಕರ್‌ಸಕ್ತಾ. ತೂ ನಿಹಾಯತ್‌ಹೀ ರಹೀಮೋ ಕರೀಮ್ ಹೈ. ತೇರೇ ಬೇನಿಹಾಯತ್ ಮುಜ್‌ಪರ್ ಇಹ್‌ಸಾನ್ ಹೈ. ಮೇರೇ ಗುನಾಹ್ ಬಕ್‌ಶ್ ತಾ ಮೈಂ ಹಲಾಕ್‌ನ ಹೋಜಾಊಂ. ಮೇರೆ ದಿಲ್‌ಮೇಂ ಅಪ್ನೀ ಖಾಲಿಸ್ ಮುಹಬ್ಬತ್ ಡಾಲ್. ತಾ ಮುಝೆ ಝಿಂದಗಿ ಹಾಸಿಲ್ ಹೋ, ಅವ್‌ರ್ ಪರ್ದ ಪೋಶೀ ಫರ್‌ಮಾ ಅವ್‌ರ್ ಮುಜ್‌ಸೆ ಐಸೆ ಅಮಲ್ ಕರಾ ಜಿನ್ ಸೆ ತೂ ರಾಝೀ ಹೋಜಾಯೆ. ಮೈಂ ತೇರೇ ವಜ್‌ಹ ಕರೀಮ್ ಕೆ ಸಾಥ್ ಉಸ್‌ಬಾತ್ ಸೆ ಭೀ ಪನಾಹ್ ಮಾಂಗ್ತಾ ಹೂಂ ಕೆ ತೇರಾ ಗಝಬ್ ಮುಜ್‌ಪರ್ ವಾರಿದ್ ಹೋ. ರಹಮ್ ಫರ್‌ಮಾ, ರಹಮ್ ಫರ್‌ಮಾ, ರಹಮ್ ಫರ್‌ಮಾ, ಅವ್‌ರ್ ದುನ್‌ಯಾ ವ ಆಖಿರತ್ ಕೀ ಬಲಾವೋಂಸೆ ಮುಝೆ ಬಚಾ ಕ್ಯೊಂಕೆ ಹರ್ ಏಕ್ ಫಝ್ಲೋ ಕರಮ್ ತೇರೇ ಹೀ ಹಾಥ್ ಮೇಂ ಹೈ. – ಆಮೀನ್.**

ಓ ಸರ್ವಲೋಕಗಳ ಪ್ರಭೂ, ನೀನು ನನಗೆ ದಯಪಾಲಿಸಿದ ಔದಾರ್ಯಗಳ ಬಗ್ಗೆ ನಾನು ನಿನಗೆ ಕೃತಜ್ಞತೆ ಅರ್ಪಿಸುವ ಶಕ್ತಿಯನ್ನು ಹೊಂದಿಲ್ಲ. ನೀನು ಅತ್ಯಂತ ದಯಾಳುವೂ ಕಾರುಣ್ಯಮಯನೂ ಆಗಿರುವೆ. ನೀನು ನನ್ನ ಮೇಲೆ ಅಸಂಖ್ಯಾತ ಅನುಗ್ರಹಗಳನ್ನು ಸುರಿಸಿರುವೆ. ನೀನು ನನ್ನ ಪಾಪಗಳನ್ನು ಕ್ಷಮಿಸಿ ನನ್ನನ್ನು ನಾಶದಿಂದ ರಕ್ಷಿಸು. ನೀನು ನಿನ್ನ ಪರಿಶುದ್ಧ ಪ್ರೀತಿಯನ್ನು ನನ್ನ ಹೃದಯದೊಳಗೆ ಹಾಕಿ ನಾನು ಜೀವಂತನಾಗುವಂತೆ ಮಾಡು. ನನ್ನ ತಪ್ಪುಗಳ

ಮೇಲೆ ಪರದೆ ಹಾಕು. ನಿನ್ನ ಸಂಪ್ರೀತಿಯನ್ನು ಗಳಿಸುವಂತಹ ಕರ್ಮಗಳನ್ನು ನನ್ನಿಂದ ಮಾಡಿಸು. ನನ್ನ ಮೇಲೆ ನಿನ್ನ ಕೋಪ ಬಂದೆರಗುವುದರಿಂದ ಅಭಯ ಯಾಚಿಸುತ್ತಾ ನಿನ್ನ ಮುಖಾರವಿಂದದ ಮೊರೆ ಹೋಗುತ್ತಿದ್ದೇನೆ. ಕಾರುಣ್ಯದೋರು, ಕಾರುಣ್ಯದೋರು, ಕಾರುಣ್ಯದೋರು. ಇಹಲೋಕ ಪರಲೋಕಗಳ ವಿಪತ್ತುಗಳಿಂದ ನನ್ನನ್ನು ರಕ್ಷಿಸು. ಏಕೆಂದರೆ ಪ್ರತಿಯೊಂದು ಅನುಗ್ರಹ ಮತ್ತು ಕಾರುಣ್ಯ ನಿನ್ನ ಕೈಯಲ್ಲಿಯೇ ಇದೆ – ಆಮೀನ್.

اَللّٰهُمَّ صَلِّ عَلٰى مُحَمَّدٍ وَّعَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ
اِنَّكَ حَمِيْدٌ مَّجِيْدٌ۔ اَللّٰهُمَّ بَارِكْ عَلٰى مُحَمَّدٍ وَّعَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيْمَ وَعَلٰى اٰلِ
اِبْرَاهِيْمَ اِنَّكَ حَمِيْدٌ مَّجِيْدٌ۔

**ಅಲ್ಲಾಹುಮ್ಮ ಸಲ್ಲಿಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್.**

ಈ ರಮಝಾನ್ ತಿಂಗಳಲ್ಲಿ ನಾವು ಮಾಡಿದ ಸತ್ಕರ್ಮಗಳನ್ನು ಹಾಗೂ ನಾವು ನಮ್ಮಲ್ಲಿ ಸೃಷ್ಟಿಸಿದ ಬದಲಾವಣೆಗಳನ್ನು ಮುಂದೆ ಸಹ ಜಾರಿಯಲ್ಲಿರಿಸಲು ಅಲ್ಲಾಹನು ನಮಗೆ ಭಾಗ್ಯ ದಯಪಾಲಿಸಲಿ. ಈ ಪ್ರಾರ್ಥನೆಗಳು ಸಹ ನಮ್ಮ ಪರವಾಗಿ ಅಲ್ಲಾಹನಂದ ಅಂಗೀಕಾರ ಪಡೆಯುವಂತಾಗಲಿ – ಆಮೀನ್.

ಈದಿನದ ಬಗ್ಗೆಯು ಪ್ರಕಟಣೆ ಇದೆ ಅನೇಕ ಜನರು ನನಗೆ ಬರೆದಿದ್ದಾರೆ ಇಲ್ಲಿನ ವೆಬ್‌ಸೈಟ್‌ನ ಪ್ರಕಾರ 24ಕ್ಕೆ ಈದ್ ಆಚರಿಸುತ್ತಿದ್ದಾರೆ. ಆದರೆ 24ಕ್ಕೆ ಈದ್ ಆಗಲು ಸಾಧ್ಯವಿಲ್ಲ. ಭಾನುವಾರ ಚಂದ್ರ ಕಾಣಲು ಸಾಧ್ಯವಿಲ್ಲ. ಮತ್ತೆ ನಾನು ಅವರಿಗೆ ಬರೆದಿರುವೆನು ಅವರು ಎರಡು, ಮೂರು ಸಲ ಇಲ್ಲಿನ ತಜ್ಞರು ಸಭೆ ಕರೆದಿದ್ದರು. ಅದರಲ್ಲಿ ಮತ್ತೆ ಬೇರೆ ವಿಷಯಗಳು ಸಹ ಸೇರಿಸಿದರು. ಅಮೀರ್ ಸಾಹೆಬರಿಗೆ ನೀವು ಸಹ ಗಮನ ನೀಡಿರೀ ಎಂದು ಉಪದೇಶಿಸಿದೆ. ತದನಂತರ ಅವರು ನನಗೆ ಒಂದು ನಕ್ಷೆ ಕಳುಹಿಸಿದರು ಅದರ ಪ್ರಕಾರ ಕೆಲವು ಪ್ರದೇಶಗಳಿವೆ: ಫಾಲ್‌ಮೌಥ್, ಪೆನ್‌ಝೆನ್ಸ್ ಮತ್ತು ಹೇಲೆ ಅಲ್ಲಿ ಬರೆಗಣ್ಣಿನಿಂದ ಚಂದ್ರ ಕಾಣಿಸುತ್ತದೆ ಆದ್ದರಿಂದ ಅನ್ಯಕಡೆಗಳಲ್ಲಿಯು ಸಹ ಈದ್ ಆಚರಿಸಬಹುದು ಎಂದರು. ಮುಸ್ಲಿಮ್ ರಾಷ್ಟ್ರಗಳಲ್ಲಿರುವ ರೋಯತೆ ಹಿಲಾಲ್ ಕಮೀಟಿ ಅವರುಗಳು ಸಹ ಹೀಗೆಯೇ ಪರಿಶಿಲಿಸುತ್ತಾರೆ. ಏನೇ ಇರಲಿ ಈ ಎಲ್ಲಾ ಪರಿಶೀಲನೆಗಳ ನಂತರ ಇನ್‌ಶಾಅಲ್ಲಾಹ್ ಈದ್ ಭಾನುವಾರ ಆಚರಿಸಲಾಗುವುದು ಎಂದು ತೀರ್ಮಾನ ಕೈಗೊಂಡಿದ್ದೇವೆ.

********************

*(ಪುಟ ಸಂಖ್ಯೆ* **01***ರ ಉಳಿದ ಭಾಗ)*

ವಿಶ್ಲೇಷಣೆಯಾಗಿದೆ. ನನ್ನ ಮೂವತ್ತು ವರ್ಷದಲ್ಲಿಯೇ ಬಿಳಿ ಕೂದಲು ಬಂದು ಬಿಟ್ಟಿದ್ದವು, ಮಿರ್ಝಾ ಸಾಹಿಬ್ ದಿವಂಗತರು ನನ್ನ ತಂದೆ ಇನ್ನು ಜೀವಂತವಾಗಿದ್ದರು. ಬಿಳಿ ಕೂದಲುಗಳು ಸಹ ಒಂದು ರೀತಿಯ ಮರಣ ಸೂಚಕವಾಗಿರುತ್ತದೆ. ವೃದ್ಧಾಪ್ಯಕ್ಕೆ ಬಂದಾಗ ಅದರ ಸಂಕೇತವಾಗಿ ಬಿಳಿ ಕೂದಲು ಬಂದಿರುತ್ತವೆ. ಆಗ ಮನುಷ್ಯನ ತನ್ನ ಮರಣದ ದಿನಗಳು ಸಮೀಪಿಸಿವೆ ಎಂದು ಭಾವಿಸುತ್ತಾನೆ. ಅದೇ ಖೇದದ ವಿಷಯವೆಂದರೆ ಆಗಲೂ ಮನುಷ್ಯನು ಚಿಂತಿಸುವುದಿಲ್ಲ. ಸತ್ಯವಿಶ್ವಾಸಿಯಾದವನು ಒಂದು ಗುಬ್ಬಿ ಅಥವಾ ಪ್ರಾಣಿಗಳಿಂದಲೂ ನೀತಿಪಾಠ ಕೇಳಬಹುದಾಗಿದೆ. ಏಕೆಂದರೆ ಅಲ್ಲಾಹನ ತೆರೆದ ಗ್ರಂಥ ಅವನ ಮುಂದಿದೆ. ಅಲ್ಲಾಹನು ಸೃಷ್ಟಿಸಿದ ಲೋಕದ ಎಲ್ಲ ವಸ್ತುಗಳಲ್ಲಿಯೂ ಭೌತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಪ್ರಯೋಜನವಾದ ಸಾಮಾನುಗಳಿವೆ. ನಾನು ಹಝ್ರತ್ ಜುನೇದ್(ರ) ಅವರ ಜೀವನಿಯಲ್ಲಿ ಓದಿರುತ್ತೇವೆ. ಅವರು ಹೇಳುತ್ತಾರೆ. ನಾನು ಜಪ ಮಾಡುವುದನ್ನು ಬೆಕ್ಕಿನಿಂದ ಕಲಿತಿರುತ್ತೇನೆ ಎಂದು ಮನುಷ್ಯನು ಗಾಢವಾಗಿ ಯೋಚಿಸುವವನಾದರೆ ತಿಳಿದುಕೊಳ್ಳಬಹುದು. ಪ್ರಾಣಿಗಳು ಸಹ ಒಳ್ಳೆಯ ಗುಣಗಳನ್ನು ಹೊಂದಿರುತ್ತವೆ. ನನ್ನ ದೃಷ್ಟಿಯಲ್ಲಿ ಎಲ್ಲಾ ಪ್ರಾಣಿ ಪಕ್ಷಿಗಳು ಒಂದು ಗುಣಾತ್ಮಕ ಜೀವಿಗಳಾಗಿವೆ. ಮನುಷ್ಯನು ಅವೆಲ್ಲದರ ಸಂಗ್ರಹವಾಗಿದ್ದಾನೆ. ಈ ಆತ್ಮವು ಪರಿಪೂರ್ಣವಾಗಿದೆ. ಅದಕ್ಕಾಗಿಯೇ ಅದನ್ನು ಕಿರಿಯ ಲೋಕವೆಂದೇ ಕರೆಯಲಾಗುತ್ತದೆ. ಅಂದರೆ ಒಟ್ಟು ಸೃಷ್ಟಿಗಳ ಶ್ರೇಷ್ಠತೆ ಮನುಸ್ಯನಲ್ಲಿ ಏಕೀಕೃತವಾಗಿದೆ ಮತ್ತು ಒಟ್ಟಾಗಿ ಮನುಷ್ಯರ ಶ್ರೇಷ್ಠತೆಗಳು ಏಕೀಕೃತಗೊಂಡು ನಮ್ಮ ರಸೂಲುಲ್ಲಾಹ್(ಸ) ರವರಲ್ಲಿ ಒಳಗೊಂಡಿದೆ. ಆ ಕಾರಣದಿಂದಲೇ ರಸೂಲ್ಲುಲ್ಲಾಹ್(ಸ) ಸರ್ವ ಲೋಕಗಳಿಗೆ ಆಗಮಿಸಿರುವವರು ಮತ್ತು ಸರ್ವಲೋಕಗಳಿಗೆ ಅನುಗ್ರಹಿಸುವವರು ಎಂದು ಕರೆಯಲ್ಪಟ್ಟರು. **"ಇನ್ನಕ ಲಅಲಾ ಖುಲುಖಿನ್ ಅಝೀಮ್"** (ಅಲ್‌ಖಲಮ್:05) ಅದರಲ್ಲಿಯೂ ಮಾನವರಲಿ ಮಹೋನ್ನತ ಗುಣಗಳುಳ್ಳ ಎಂದು ಸಂಕೇತಿಸಲಾಗಿದೆ. ಆ ನೆಲೆಯಲ್ಲಿ ನಾವು ರಸೂಲುಲ್ಲಾಹ್(ಸ) ರವರ ನೀತಿಗುಣಗಳ ಸ್ಥಾನಮಾನದ ಬಗ್ಗೆ ಚಿಂತಿಸಬೇಕಾಗಿದೆ. ಆ ಕಾರಣದಿಂದಲೇ ಅವರಲ್ಲಿ ಪ್ರವಾದಿತ್ವದ ಎಲ್ಲ ಶ್ರೇಷ್ಠತೆಗಳು ಅಂತ್ಯಗೊಂಡಿದೆ ಎಂದು ಹೇಳಿರುವುದು. ಯಾವುದೇ ವಸ್ತು ಅಥವಾ ವಿಷಯದ ಪರಿಪೂರ್ಣತೆ ಸಾಧಿತವಾದಾಗ ಅದನ್ನು "ಸಮಾಪ್ತಿ" ಎಂದು ಕರೆಯುವುದು ಸಾಮಾನ್ಯ ಮಾತಾಗಿದೆ. ಉದಾಹರಣೆಗೆ ಯಾವುದೇ ಒಂದು ಗ್ರಂಥದ ಎಲ್ಲ ವಿಷಯಗಳು ಪೂರ್ಣಗೊಂಡಾಗ ಅದರ ಸಮಾಪ್ತಿ ಎಂದು ಹೇಳುತ್ತಾರೆ. ಅದೆ ರೀತಿ ಪ್ರವಾದಿತ್ವದ ಎಲ್ಲ ಧ್ಯೇಯೋದ್ದೇಶಗಳು ರಸೂಲುಲ್ಲಾಹ್(ಸ) ಅವರಲ್ಲಿ ಪೂರ್ಣಗೊಂಡಿದೆ. ಇದುವೆ ಪ್ರವಾದಿತ್ವ ಸಮಾಪ್ತಿ (ಖುತ್‌ಮೆ–ನುಬುವ್ವತ್) ಅರ್ಥವಾಗಿದೆ. ಏಕೆಂದರೆ ಇದೊಂದು ಸರಣಿಯಾಗಿ ನಡೆದುಕೊಂಡು ಬಂದಿದೆ. ಅದು ಪರಿಪೂರ್ಣ ಮಾನವರಲ್ಲಿ ಸಮಾಪ್ತಿಗೊಂಡಿದೆ.

**(ಮಲ್ಫೂಝಾತ್ ಸಂಪುಟ–1, ಪುಟ–149–152 ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ* **12***ರ ವರದಿಯ ಉಳಿದ ಭಾಗ)*

ಜರ್ಮನಿಯಿಂದ ಕೆಳಗೆ ನಮೂದಿತ 6 ಜಮಾಅತುಗಳಿಂದ ತಮ್ಮ ಪ್ರಿಯ ನೇತಾರರನ್ನು ಭೇಟಿಯಾಗಲು ಬಂದು ತಲುಪಿದ್ದರು.

1. Vechta, 2. Hamburg, 3. Luneburg, 4. Lubeck, 5. Pinneberg, 6. Bremen. ಅದಲ್ಲದೆ ಸ್ವೀಡನ್‌ನಲ್ಲಿ ಪಾಕಿಸ್ತಾನದಿಂದ ಭೇಟಿಯಾಗಲು ಬಂದ ಒರ್ವ ಸಂಘಟನಾ ಮುರಬ್ಬಿಯವರೂ ಮಹದಿಯಾಬಾದ್ ತಲುಪಿ ತಮ್ಮ ಪ್ರೀತಿಯ ಇಮಾಮರೊಂದಿಗೆ ಭೇಟಿಯಾಗುವ ಭಾಗ್ಯ ಪಡೆದರು. ಭೇಟಿ ಮಾಡಲು ಬಂದ ಎಲ್ಲ ಜಮಾಅತ್ ಬಾಂಧವರು ತಮ್ಮ ನೇತಾರರೊಂದಿಗೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೇಖನಿ (Pen) ನೀಡಿದರು ಮತ್ತು ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್ಲೇಟ್ ಹಂಚಿದರು.

ಭೇಟಿಯ ಈ ಕಾರ್ಯಕ್ರಮವು 7 ಗಂಟೆ 15 ನಿಮಿಷದವರೆಗೆ ನಡೆಯಿತು. ಅನಂತರ ಹುಝೂರ್ ಜಮಾಅತ್ ಕೇಂದ್ರದ ಮತ್ತು ಪುರಾತನ ಕಟ್ಟಡ ಮತ್ತು ಕಚೇರಿಗಳನ್ನೂ ಅರಬಿ ಹೌಸನ್ನೂ ವೀಕ್ಷಿಸಿದರು. ವ್ಯವಸ್ಥಾಪಕರಿಗೆ ಕೆಲವು ಸಲಹೆಗಳನ್ನು ನೀಡಿದರು.

**ಸನ್ಮಾನ ಸಮಾರಂಭ**

ಅನಂತರ ಹುಝೂರ್ ದೊಡ್ಡ ಮಾರ್ಕಿಯಲ್ಲಿ ಆಗಮಿಸಿದರು. ಅಲ್ಲಿ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜರ್ಮನಿ ಅವರ ವತಿಯಿಂದ ಮಾಜಿ ಅಧ್ಯಕ್ಷರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಅವರ ಗೌರವಾರ್ಥವಾಗಿ ವಿದಾಯ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದಲ್ಲಿ ಮಾಜಿ ಅಧ್ಯಕ್ಷರುಗಳು (ಮುಕರ್ರಮ್ ಹಸನಾತ್ ಅಹ್ಮದ್ ಸಾಹಿಬ್) ಭಾಗವಹಿಸಿದ್ದರು.

ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜರ್ಮನಿ, ನೆಫ್ಸಲ್ ಮಜ್ಲಿಸ್ ಆಮಿಲಾ ಖುದ್ದಾಮುಲ್ ಅಹ್ಮದಿಯಾ ಜರ್ಮನಿ ಮತ್ತು ಎಲ್ಲ ಖಾಯಿದ್‌ಗಳು, ಮುಜಾಲಿಸ್ ಖುದ್ದಾಮುಲ್ ಅಹ್ಮದಿಯಾ ಅಲ್ಲದೆ ಇತರ ಪದಾಧಿಕಾರಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಾರಂಭವು ಪವಿತ್ರ ಖುರ್‌ಆನಿನ ಪಠಣದೊಂದಿಗೆ ನಡೆಯಿತು. ಅದನ್ನು ಮುಕರ್ರಮ್ ಹಮಾದ್ ಸಾಹಿಬ್, ಮುಖ್ಯ ಕಾರ್ಯದರ್ಶಿ, ಖುದ್ದಾಮುಲ್ ಅಹ್ಮದಿಯಾ, ಜರ್ಮನಿ ನೆರವೇರಿಸಿಕೊಟ್ಟರು. ಅನಂತರ ಮುಕರ್ರಮ್ ಮನ್ನಾನ್ ಅಹ್ಮದ್ ಬಾಜ್ವಾ ಸಾಹಿಬ್, ನಾಯಿಬ್ ರೀಜನಲ್ ಖಾಯಿದ್ ಖುದ್ದಮುಲ್ ಅಹ್ಮದಿಯಾ, ಹೆಂಬರ್ಗ್ ಅವರು ಮಧುರ ಕಂಠದೊಂದಿಗೆ ಕವನ ಪ್ರಸ್ತುತಪಡಿಸಿದರು. ಅನಂತರ ಹುಝೂರ್ ಸಭಿಕರನ್ನುದ್ದೇಶಿಸಿ ಮಾತನಾಡಿದರು.

ಹುಝೂರ್ ಹೇಳಿದರು: ಇಂದಿನ ಈ ಸಮಾರಂಭವು ಅಗಲುತ್ತಿರುವ ಖುದ್ದಾಮುಲ್ ಅಹ್ಮದಿಯಾ ಅಧ್ಯಕ್ಷರ ಗೌರವಾರ್ಥವಾಗಿ ಏರ್ಪಡಿಸಲಾಗಿದೆ. ಅವರು ತಮ್ಮ ಆರು ವರ್ಷಗಳ ಸೇವಾ ಅವಧಿಯನ್ನು ಮುಗಿಸಿರುತ್ತಾರೆ. ಅವರು ಇನ್ನೂ ಸಹ ಖುದ್ದಾಮುಲ್ ಅಹ್ಮದಿಯಾಕ್ಕೆ ಸೇರಿದವರಾಗಿದ್ದಾರೆ. ಹಿಂದಿನ ವರ್ಷದಿಂದ ಪ್ರಸಕ್ತ ಅಧ್ಯಕ್ಷರಿಗೆ ಕಾರ್ಯಭಾರ ವಹಿಸಿಕೊಟ್ಟು ಒಂದು ವರ್ಷ ಪೂರ್ಣಗೊಂಡಿರುತ್ತದೆ.

ಖುದ್ದಾಮಲ್ ಅಹ್ಮದಿಯಾದಲ್ಲಿ ಕಾರ್ಯ ನಿರ್ವಹಿಸುವವರು ಅಲ್ಲಾಹನ ಅನುಗ್ರಹದಿಂದ ಲೋಕದ ಎಲ್ಲ ದೇಶಗಳಲ್ಲೂ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅಗಲಿ ಹೋಗುತ್ತಿರುವ ಅಧ್ಯಕ್ಷರಿಗೆ ನಾನು ಹೇಳಬಯಸುವುದೇನೆಂದರೆ ಈಗಲೂ ನೀವು ಜಮಾಅತ್ತಿನ ಕೆಲಸಗಳನ್ನು ಸೇವಾ ಮನೋಭಾವದಿಂದ ಜಾರಿಗೊಳಿಸುತ್ತಿರಬೇಕು. ಈ ಮನೋಭಾವನೆ ಎಂದೂ ಕೊನೆಗೊಳ್ಳಬಾರದು.

ಕೆಲವು ದೊಡ್ಡ ಹುದ್ದೆಗಳು ಲಭಿಸಿದ ಕಾರಣ ಸ್ಥಾನ ದೊಡ್ಡದಾಯಿತು ಎಂದು ಭಾವಿಸಬಾರದು. ಬದಲು ಪ್ರತಿ ಹುದ್ದೆದಾರನಿಗೆ ಈ ವಿಷಯ ನೆನಪಿಡಬೇಕಾಗಿದೆ. ರಸೂಲುಲ್ಲಾಹ್(ಸ) ಹೇಳಿದ್ದಾರೆ: "ಸಯ್ಯಿದುಲ್ ಖೌಮಿ ಖಾದಿಮುಹುಮ್" "ಸಮುದಾಯದ ಸರದಾರನು ಆ ಸಮುದಾಯದ ಸೇವಕನಾಗಿರುವನು"

ಪ್ರತಿಯೊಬ್ಬರಲ್ಲಿ ಈ ಭಾವನೆ ಜನ್ಮ ತಾಳಿದರೆ ಒಂದು ಕ್ರಾಂತಿಯೇ ಆಗಬಹುದು. ಕವನಗಳನ್ನು ಹೇಳುತ್ತೀರಿ. ಉತ್ಸಾಹಭರಿತ ಭಾಷಣಗಳನ್ನು ಮಾಡುತ್ತೀರಿ. ದೊಡ್ಡದಾದ ಆಶಯವನ್ನು ವ್ಯಕ್ತಪಡಿಸುತ್ತೀರಿ. ಆದರೆ ಅದನ್ನು ನೀವು ಕಾರ್ಯರೂಪಕ್ಕೆ ತಂದಾಗ ಮಾತ್ರ ಸಾರ್ಥಕವಾಗುವುದು. ನಿಮ್ಮ ನುಡಿಗಳಿಗೆ ನಡತೆ ಸಾಕ್ಷ್ಯ ವಹಿಸುವಂತಾಗಿರಬೇಕು. ಬರುವ ಅಧ್ಯಕ್ಷರೂ ಈ ಮಾತು ನೆನಪಿಡಬೇಕು. ಒಂದು ದೀರ್ಘ ಸಮಯ ಸೇವೆ ಸಲ್ಲಿಸುವ ಭಾಗ್ಯ ಪಡೆದವರೂ ನೆನಪಿಡಬೇಕು. ಇನ್ನಿತರ ಜಾಗದಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರೆತವರೂ ನೆನಪಿಡಬೇಕು. ಪ್ರತಿ ಅಧಿಕಾರಿ, ಅಮೀರ್‌ನಿಂದ ಹಿಡಿದು ಕೆಳ ಕ್ರಮಾಂಕದವರೂ ನೆನಪಿಡಬೇಕು. ಇದು ಅಲ್ಲಾಹನ ಅನುಗ್ರಹವಾಗಿದೆ. ಅವನು ನಮಗೆ ಧರ್ಮ ಸೇವೆಯ ಭಾಗ್ಯವನ್ನು ದಯಪಾಲಿಸುತ್ತಿದ್ದಾನೆ. ಇದು ಯಾರೊಬ್ಬರ ಹಕ್ಕಲ್ಲ. ಆದುದರಿಂದ ಈ ಅನುಗ್ರಹವನ್ನು ಸದಾ ನೆನಪಿಡಿರಿ.

ಖಾಯಿದ್‌ಗಳು ಸಹ ಇಲ್ಲಿ ಕುಳಿತಿದ್ದಾರೆ. ಅವರಿಗೂ ಖುದ್ದಾಮುಲ್ ಅಹ್ಮದಿಯಾ ನೆಲೆಯಲ್ಲಿ ಹೇಳಬಯಸುತ್ತೇನೆ. ಖುದ್ದಾಮುಲ್ ಅಹ್ಮದಿಯರ ಒಂದು ಬಹುದೊಡ್ಡ ಕೆಲಸವು ಅಹ್ಮದಿಯಾ ಖಿಲಾಫತ್ತನ್ನು ರಕ್ಷಿಸುವುದಾಗಿದೆ. ಅದಕ್ಕಾಗಿ ನೀವು ಪ್ರತಿಜ್ಞೆ ವಹಿಸುವವರಾಗಿದ್ದೀರಿ. ಸಾಮಾನ್ಯ ಅಥವಾ ವಿಶೇಷ ರಕ್ಷಣಾ ಕರ್ತವ್ಯವನ್ನು ಮಾಡುವಂತಹ ರಕ್ಷಣಾ ಕಾರ್ಯ ಇದಲ್ಲ. ವಾಸ್ತವಧಲ್ಲಿ ರಕ್ಷಣೆ ಎಂದರೆ ಖಲಿಫರ ಮಾತುಗಳನ್ನು ಕೇಳಬೇಕು ಮತ್ತು ಅದರಂತೆ ನಡೆಯಬೇಕು. ಅದರಂತೆ ನಡೆಸಬೇಕು. ಹೊಸ ಪೀಳಿಗೆಗಳನ್ನು ಸಜ್ಜುಗೊಳಿಸಬೇಕು. "ನಾವು ಎಡಬದಿಯಲ್ಲೂ ಹೋರಾಡುವೆವು. ಬಲಬದಿಯಲ್ಲೂ ಹೋರಾಡುವೆವು. ಮುಂದೆಯೂ ಹೋರಾಡುವೆವು ಮತ್ತು ಹಿಂದೆಯೂ ಹೋರಾಡುವೆವು". ಎಂಬಂತಹ ವಾದವನ್ನಷ್ಟೇ ಮಾಡುವುದು ಸರಿಯಲ್ಲ. ಇದು ಯುದ್ಧದ ಸಮಸ್ಯೆಯಲ್ಲ. ಇಂದಿನ ಯುದ್ಧ, ಇಂದಿನ ಜಿಹಾದ್ ಎಂದರೆ ನುಡಿದಂತೆ ನಡೆಯುವುದಾಗಿದೆ. ಈ ವಾಸ್ತವ ಕೆಲಸವನ್ನೇ ಖುದ್ದಾಮುಲ್ ಅಹ್ಮದಿಯಾ ಮಾಡಬೇಕಾಗಿದೆ. ಇದು ಪ್ರತಿಯೊಬ್ಬ ಖಾಯಿದ್‌ನ ಮತ್ತು ಝುಯೀಮನ ಕೆಲಸವಾಗಿದೆ. ಪ್ರತಿಯೊಬ್ಬ ನಾಝಿಮನು ಕೆಲಸವಾಗಿದೆ. ಪ್ರತಿಯೊಬ್ಬ ಕಾರ್ಯದರ್ಶಿ (Secretary) ಯ ಕೆಲಸವಾಗಿದೆ. ಪ್ರತಿಯೊಬ್ಬ ಅಧ್ಯಕ್ಷನ ಕೆಲಸವಾಗಿದೆ. ಆದುದರಿಂದ ಈ ಮಾತನ್ನು ಸದಾ ನೆನಪಿಡಿರಿ. ಇಲ್ಲಿ ಹೇಳಲಾಗುತ್ತಿರುವ ಮಾತುಗಳು, ಕೇಳುತ್ತಿರುವ ಭಾಷಣಗಳು ಖುತುಬಗಳು ಅದರಂತೆ ನಡೆದುಕೊಳ್ಳಬೇಕು ಮತ್ತು ಅದರಂತೆ ನಡೆಸಬೇಕು. ತಾವು ನಡೆದುಕೊಂಡಾಗ ಮಾತ್ರ ಇತರರೂ ಅದರಂತೆ ನಡೆಯುವ ಪ್ರಯತ್ನ ಮಾಡುವರು.

ನನಗೆ ನೆನಪಿದೆ. ನನ್ನ ಖಿಲಾಫತ್ತಿನ ಪ್ರಾರಂಭದಲ್ಲಿ ಮುಬಶ್ಶಿರ್ ಅಯಾಝ್ ಸಾಹಿಬ್ ನನಗೆ ಬರೆದಿದ್ದರು: "ಖಲೀಫರಗಳ ಖುತುಬಗಳು ಮತ್ತು ಭಾಷಣಗಳ ಸಂಗ್ರಹ ಮುದ್ರಣಗೊಳ್ಳುತ್ತದೆ. ಅವರು ಅಗಲಿ ಹೋದ ನಂತರ ಮುದ್ರಿಸಲಾಗುತ್ತದೆ. ಅದಾಗ್ಯೂ ಅವರ ಜೀವನದಲ್ಲಿ ಈ ಕೆಲಸವಾಗಬೇಕಾಗಿದೆ. ಆದುದರಿಂದ ಅವರು ಈ ರೀತಿ ಬರೆದು ತಮ್ಮ ಬಯಕೆಯನ್ನು ವ್ಯಕ್ತಪಡಿಸಿದರು. ನನ್ನ ಬಯಕೆಯು ಪಂಚಮ ಖಿಲಾಫತ್ ಅವಧಿಯ ಅಂದರೆ ನನ್ನ ಅವಧಿಯ ಖುತುಬಗಳು ಜೊತೆ ಜೊತೆಯಲ್ಲಿ ಪ್ರತಿ ವರ್ಷ ಪ್ರಕಟಪಡಿಸಿದರೆ ಉತ್ತಮವಾದೀತು. ನಾನು ಅದಕ್ಕೆ ಅನುಮತಿ ನೀಡಿದೆ. ಅದೇ ಸರಿಯಾಗಿದೆ. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತಿನಲ್ಲಿ ಮುಂದೆಯೂ ಇನ್‌ಶಾಲ್ಲಾಹ್, ಖಲೀಫರು ಬರುವರು. ಪ್ರತಿಯೊಬ್ಬರಿಗೆ ಒಂದು ಕಾಲ ನಿಶ್ಚಿತವಾಗಿರುತ್ತದೆ. ಕಾಲಕ್ಕೆ ತಕ್ಕಂತೆ ಅಲ್ಲಾಹನು ಸ್ವಯಂ ಮಾರ್ಗದರ್ಶನ ನೀಡುವನು. ಆದುದರಿಂದ ಒಂದು ಕಾಲ ಅಂತ್ಯಗೊಂಡ ನಂತರ ಹೊಸ ಖಲೀಫರ ಆಯ್ಕೆ ಆಗುತ್ತದೆ. ಅಲ್ಲಾಹನು ಈ ಅನುಗ್ರಹವನ್ನು ದಯಪಾಲಿಸಿದಾಗ ಅದರಂತೆಯೇ ನಡೆಯಬೇಕಾಗುತ್ತದೆ. ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡಿದಂತೆ ನಡೆಯುವನು. ಆದುದರಿಂದ ಹಿಂದಿನ ಗ್ರಂಥಗಳನ್ನು ಪ್ರಕಟಗೊಳಿಸುವ ಬದಲಿಗೆ ಪ್ರಸಕ್ತ ಖಲೀಫರ ಗ್ರಂಥಗಳನ್ನು ಪ್ರಕಟಿಸುವುದೇ ಉತ್ತಮವಾಗಿರುತ್ತದೆ. ಹಿಂದಿನ ಗ್ರಂಥದಿಂದಲೂ ಕೆಲವು ಐತಿಹಾಸಿಕ ವಿಷಯಗಳು ದೊರೆಯುತ್ತವೆ. ಕೆಲವು ಜ್ಞಾನಗಳು ಲಭ್ಯವಾಗುತ್ತವೆ. ಅದು ಸಹ ಪ್ರಕಟಗೊಳ್ಳಬೇಕು. ಆದರೆ ಇಂದಿನ ಯುಗದಲ್ಲಿ ಪ್ರಸಕ್ತ ಖಲೀಫರ ಮಾತುಗಳನ್ನು ಆಲಿಸುವುದು ಮುಖ್ಯವಾಗಿರುತ್ತದೆ. ಅದರಂತೆ ನಡೆಯಬೇಕು. ಅದರ ತಾತ್ಪರ್ಯ ಹೀಗಿತ್ತು. ಹಾಗಿತ್ತು ಎನ್ನುವಂತಾಗಬಾರದು. ಕೆಲವರು ಪರಸ್ಪರ ಮಾತನಾಡಿಕೊಳ್ಳುತ್ತಿರುವಾಗ ಅಧಿಕಾರಿ ವರ್ಗದವರು ಹೇಳುತ್ತಿರುತ್ತಾರೆ. ಖಲಿಫರು ಹೇಳುವ ಮಾತಿನ ಅರ್ಥ ಹೀಗಿತ್ತು. ಹೀಗಿರಲಿಲ್ಲ ಎನ್ನುತ್ತಾರೆ. ಹಾಗೇನಾದರೂ ಇದ್ದಿದ್ದರೆ ಖಲೀಫರು ಉಪಸ್ಥಿತರಿದ್ದಾರೆ. ಅವರಿಂದ ಅದರ ಅರ್ಥ ಕೇಳಬೇಕು. ಅಗಲಿದ ಖಲೀಫರ ಮಾತಾಗಿದ್ದರೂ ಅದರ ವಿಶ್ಲೇಷಣೆ ಮಾಡುವ ಹಕ್ಕು ಪ್ರಸಕ್ತ ಖಲೀಫರ ಕೆಲಸವಾಗಿರುತ್ತದೆ. ಮಸೀಹ ಮೌಊದ್(ಅ) ರವರ ಮಾತುಗಳ ಅರ್ಥ ವಿಶ್ಲೇಷಣೆ ಮಾಡುವ ಹಕ್ಕು ಯಾವ ಅಧಿಕಾರಿಗೂ ಇರುವುದಿಲ್ಲ. ಬದಲಾಗಿ ಆ ಕಾರ್ಯದ ಹೊಣೆ ಪ್ರಸಕ್ತ ಖಲೀಫರದ್ದೇ ಆಗಿರುತ್ತದೆ. ಆದುದರಿಂದ ಖುದ್ದಾಮುಲ್ ಅಹ್ಮದಿಯಾ ಮತ್ತು ಇತರ ಎಲ್ಲ ಅಧಿಕಾರ ವರ್ಗದವರು ನೆನಪಿಡಬೇಕು. ನೀವು ಪ್ರಸಕ್ತ ಖಲಿಫರ ಮಾತುಗಳನ್ನು ಕೇಳಬೇಕು ಮತ್ತು ಅದರಂತೆ ನಡೆದುಕೊಳ್ಳಬೇಕು. ಹಳೆಯ ಮಾತುಗಳನ್ನು ಕೆದಕುವ ಅವಶ್ಯಕತೆ ಇಲ್ಲ.

ಅಲ್ಲಾಹನು ಇಚ್ಛಿಸುವವರೆಗೆ ಒಬ್ಬ ಖಲೀಫನಿಗೆ ಜೀವನ ನೀಡುತ್ತಾನೆ ಮತ್ತು ಅವನ ಕಾರ್ಯಗಳನ್ನು ನಡೆಸುತ್ತಾನೆ. ಅವನು ಬಯಸಿದಾಗ ಆ ಕಾಲವನ್ನು ಅಂತ್ಯಗೊಳಿಸುತ್ತಾನೆ. ಹೊಸ ಯುಗ ಪ್ರಾರಂಭವಾಗುತ್ತದೆ. ಆದುದರಿಂದ ಈ ವಾಸ್ತವವನ್ನು ಪ್ರತಿಯೊಬ್ಬ ಅಧಿಕಾರಸ್ಥನು ತಿಳಿಯುವ ಅವಶ್ಯಕತೆಯಿದೆ. ವಿಶೇಷವಾಗಿ ಖುದ್ದಾಮುಲ್ ಅಹ್ಮದಿಯಾ ಅವರ ಧ್ಯೇಯವೇ ಖಿಲಾಫತ್ ವ್ಯವಸ್ಥೆಯ ರಕ್ಷಣೆಯಾಗಿದೆ. ಖಿಲಾಫತ್ ರಕ್ಷಣೆ ಮಾಡುವುದಾದರೆ ನಮ್ಮ ಯುವಕರಲ್ಲಿ ಮತ್ತು ಮಕ್ಕಳಲ್ಲಿ ಖಲೀಫರ ಅನುಸರಣೆಯನ್ನು ನೆಲೆಗೊಳಿಸಬೇಕು. ಅವರ ಮಾತಿನಂತೆ ನಡೆಯುವ ಅಭ್ಯಾಸ ಬೆಳೆಸಬೇಕು. ಆಗ ಮಾತ್ರ ಖಿಲಾಫತ್ ರಕ್ಷಣೆ ಸಾಧ್ಯವಾಗಬಹುದು. ಅದನ್ನು ಬಿಟ್ಟರೆ ಬೇರೆ ಕೇವಲ ಮಾತುಗಳಾಗಿವೆ. ಆದುದರಿಂದ ನಾನು ಪ್ರಾರ್ಥಿಸುವೆನು. ಅಲ್ಲಾಹನು ನಿಮಗೆಲ್ಲರಿಗೂ ನಜ ಅರ್ಥದಲ್ಲಿ ಖಿಲಾಫತ್ತಿನ ರಕ್ಷಣೆ ಮಾಡುವ ಭಾಗ್ಯ ದಯಪಾಲಿಸಲಿ.

ಸಂಬೋಧನೆಯ ನಂತರ ಹುಝೂರ್ ದುಆ ಮಾಡಿಸಿದರು. ಅನಂತರ ಉಪಸ್ಥಿತರೆಲ್ಲರೂ ಹುಝೂರರ ಜೊತೆಯಲ್ಲಿ ಊಟ ಮಾಡಿದರು.

**ಆಮೀನ್ ಸಮಾರಂಭ**

ಈ ಕಾರ್ಯಕ್ರಮದ ನಂತರ 8 ಗಂಟೆ 10 ನಿಮಿಷಕ್ಕೆ ಹುಝೂರ್ "ಮಸ್ಜಿದ್ ಬೈತುಲ್ ಬಸೀರ್"ಗೆ ಆಗಮಿಸಿದರು. ಅಲ್ಲಿ ಆಮೀನ್ ಸಮಾರಂಭ ಏರ್ಪಡಿಸಲಾಗಿತ್ತು. ಹುಝೂರ್ ಕೆಳಗೆ ನಮೂದಿತ 29 ಬಾಲಕ ಬಾಲಕಿಯರಿಂದ ಪವಿತ್ರ ಖುರ್‌ಆನಿನ ಒಂದೊಂದು ವಚನವನ್ನು ಆಲಿಸಿದರು ಮತ್ತು ಕೊನೆಯಲ್ಲಿ ದುಆ ಮಾಡಿಸಿದರು.

ಅಝೀಝುವ್ ತನ್‌ಝೀಲ್ ಅಹ್ಮದ್ ಮಲಿಕ್, ತೌಹೀದ್ ನೂರುದ್ದೀನ್, ಸಾಖಿಬ್ ಅಹ್ಮದ್ ಜಾವೇದ್, ಅದೀಲ್ ಅಹ್ಮದ್, ಬಾಸಿಲ್ ಫಾತೆಹ್ ಅಹ್ಮದ್, ಅತಾಉಲ್ ಖಬೀರ್ ಅಹ್ಮದ್, ಸಮರ್ ಅಹ್ಮದ್, ಮಲಿಕ್ ಆಜಿಲ್ ಅಹ್ಮದ್, ಹಸ್ಸಾನ್ ಅಹ್ಮದ್ ಖಮರ್, ಮಲಕ್ ಹಸೀಬ್ ಅಹ್ಮದ್ ಖೋಖರ್, ಫಖರ್ ಸರ್‌ವಿಶ್ ಅಹ್ಮದ್, ಮಿರ್ಝ ಮುನೀಬ್ ಅಹ್ಮದ್, ಮೊಹಿದ್ ಅಹ್ಮದ್, ಅಬ್ದುಲ್ ಗಫೂರ್ ಅಲೀಮ್ ರಾನಾ, ಅರ್ಮಾನ್ ನಸೀರುದ್ದೀನ್, ಸದೀದ್ ಅಹ್ಮದ್, ಅದೀಲ್ ಎಹ್ಸಾನ್ ಖೋಖರ್, ಅಝೀಝು ಅರ್ವಿಶ್ ನಾದಿಯಾ ರಾನಾ, ಈಮಾನ್ ಅಖ್ತರ್, ನೂರಮ್ ಜಬ್ಬಾರ್, ಸಾಯೆರ ಮಲಿಕ್, ಸಲ್ಮಾ ಅಹ್ಮದ್, ಉರೂಸ ಖಮರ್, ಮಾಹೀನ್ ಅರ್‌ಶದ್, ಸತ್ವತ್ ಅಹ್ಮದ್, ಮೆಹ್ವಿಶ್ ಅರ್‌ಶದ್, ಹಿರಾ ಚೌಧರಿ, ದಿಯಾ ಖೋಖರ್, ಅಬೀರ ಕಮಾಲ್.

ಆಮೀನ್ ಸಮಾರಂಭದ ನಂತರ ಹುಝೂರ್ ಮಗ್ರೀಬ್, ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**26 ಅಕ್ಟೋಬರ್ 2019 (ಶನಿವಾರ)**

ಹುಝೂರ್ ಅನ್ವರ್(ಅಬಿಅ) ಮುಂಜಾನೆ 7 ಗಂಟೆಗೆ ಮಸ್ಜಿದ್ "ಬೈತುಲ್ ಬಸೀರ್ ಮಹದಿ ಆಬಾದ್ ಆಗಮಿಸಿ ಪಜರ್ ನಮಾಝ್ ನಿರ್ವಹಿಸಿ ಕೊಟ್ಟರು.

ನಮಾಝ್ ನಿರ್ವಹಣೆಯ ನಂತರ ಹುಝೂರ್(ಅಬಿಅ) ತಮ್ಮ ವಸತಿ ನಿಲಯಕ್ಕೆ ತೆರಳಿದರು. ಮುಂಜಾನೆ ಹುಝೂರ್(ಅಬಿಅ) ಕಚೇರಿಯ ಅಂಚೆ ಪತ್ರಗಳು ಮತ್ತು ವರದಿಗಳನ್ನು ಪರಿಶೀಲಿಸಿದರು. ಕೆಲವು ನಿರ್ದೇಶನಗಳನ್ನು ನೀಡಿದರು.

ಕಾರ್ಯಕ್ರಮದನ್ವಯ 11 ಗಂಟೆಗೆ ಹುಝೂರ್(ಅಬಿಅ) ತಮ್ಮ ಕಛೇರಿಗೆ ಆಗಮಿಸಿದರು. ಕೌಟುಂಬಿಕ ಭೇಟಿಗಳನ್ನು ಪ್ರಾರಂಭಿಸಿದರು. ಮುಂಜಾನೆಯ ಈ ಅಧಿವೇಶನದಲ್ಲಿ 40 ಕುಟುಂಬಗಳ 141 ಜನರು ತಮ್ಮ ಪ್ರಿಯ ನಾಯಕರೊಡನೆ ಭೇಟಿಯಾಗುವ ಭಾಗ್ಯ ಪಡೆದರು ಭೇಟಿ ಮಾಡಲು ಬಂದ ಈ ಕುಟುಂಬಗಳು ಜರ್ಮನಿಯ ವಿವಿಧ 22 ಜಮಾಅತ್‌ಗಳಿಂದ ಬಂದಿದ್ದರು. ಅದಲ್ಲದೆ ಬೆಲ್ಜಿಯಂನಿಂದ ಬಂದ ಒಂದು ಕುಟುಂಬವೂ ಭೇಟಿಯಾಗುವ ಭಾಗ್ಯ ಪಡೆದರು. ಭೇಟಿಯಾದ ಇವರೆಲ್ಲ ಬಂಧುಗಳು ಹುಝೂರ್(ಅಬಿಅ) ಜೊತೆ ಬಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್(ಅಬಿಅ)

ಪ್ರೀತಿಯಿಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲೇಖನಿ (Pen), ಸಣ್ಣ ಬಾಲಕ, ಬಾಲಕಿಯರಿಗೆ ಚಾಕ್ಲೆಟನ್ನು ನೀಡಿದರು.

ಭೇಟಿಯ ಈ ಕಾರ್ಯಕ್ರಮವು 1 ಗಂಟೆ 20 ನಿಮಿಷದವರೆಗೆ ಜಾರಿಯಲ್ಲಿತ್ತು. ಅನಂತರ ಹುಝೂರ್(ಅಬಿಅ) ಆಗಮಿಸಿ ಮಸ್ಜಿದ್ "ಬೈತುಲ್ ಬಸೀರ್" ಹೊರಾಂಗಣದಲ್ಲಿ Ornamental cherry ಎಂಬ ಒಂದು ಸಸ್ಯವನ್ನು ನೆಟ್ಟಿದ್ದರು. ಆ ಸಸ್ಯವನ್ನು Japanese Cherry Blossom ಎಂದು ಹೆಸರಿಸಲಾಗಿದೆ. ಅನಂತರ ಚಿತ್ರ ತೆಗೆದುಕೊಳ್ಳುವ ಕಾರ್ಯಕ್ರಮ ಆಯಿತು. ಈ ಕೆಳಗಿನ ಗುಂಪುಗಳು ಸರತಿಯಂತೆ ಹುಝೂರ್(ಅಬಿಅ) ಜೊತೆ ಬಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಮಹದಿ ಆಬಾದ್ ಜಮಾಅತ್ತಿನ ಮಜ್ಲಿಸ್ ಆಮಿಲಾ, ವಖಾರೆ ಅಮಲ್ ಮಾಡುವ ಭಾಗ್ಯ ಪಡೆದ ಗ್ರೂಪ್ ಸದಸ್ಯರು, Badsege Berg ಜಮಾಅತ್ತಿನ ಮಜ್ಲಿಸ್ ಆಮಿಲ, MTA ಜರ್ಮನಿ ಟೀಮ್, MTA International Team, ಮಾಧ್ಯಮ ಮತ್ತು ಪ್ರಸಾರ, ಹುಝೂರ್(ಅಬಿಅ) ಜೊತೆ ಬಂದ ಸದಸ್ಯರು, ಝಿಯಾಫತ್ (ಆತಿಥ್ಯ) ವಿಭಾಗದ ಕಾರ್ಯಕರ್ತರು, ಹಾಗೂ ಕೆಲವು ಸದಸ್ಯರು ಉಳಿದುಕೊಂಡರು. ಹುಝೂರ್(ಅಬಿಅ) ಪ್ರೀತಿಯಿಂದ ಅವರಿಗೆ ಇನ್ನೊಂದು ಅವಕಾಶ ನೀಡಿ ಬಾವಚಿತ್ರ ತೆಗೆಯಲು ಅನುಮತಿ ನೀಡಿದರು.

ಮಖ್ಝಾನೆ ತಸಾವೀರ್ ವಿಭಾಗ, ಭೇಟಿ ಮಾಡಿಸುವ ಕಾರ್ಯಕರ್ತರ ಭಾವಚಿತ್ರ ಕಾರ್ಯಕ್ರಮದ ನಂತರ ಹುಝೂರ್(ಅಬಿಅ) ಕಿಚನ್ ವಿಭಾಗಕ್ಕೆ ಆಗಮಿಸಿದರು. ಕಾರ್ಯಕರ್ತರು ಮಧ್ಯಾಹ್ನದ ಊಟ ತಯಾರು ಮಾಡುತ್ತಿದ್ದರು. ಹುಝೂರ್(ಅಬಿಅ) ಪ್ರೀತಿಯಿಂದ ಅವರೊಡನೆ ಮಾತನಾಡಿದರು. ಅನಂತರ ಹುಝೂರ್(ಅಬಿಅ) ಉಗ್ರಾಣ (ಸ್ಟೋರ್) ಕಡೆ ಆಗಮಿಸಿದರು. ಅಲ್ಲಿ ಊಟದ ಸಾಮಗ್ರಿಗಳು ಮತ್ತು ಕೆಲವು ಅಗತ್ಯ ವಸ್ತುಗಳು ಸಂಗ್ರಹಿಸಿಡಲಾಗಿತ್ತು.

ಅನಂತರ ಹುಝೂರ್(ಅಬಿಅ) ಬೇರೆಕಡೆ ತೆರಳಿದರು ಅಲ್ಲಿ ಲಜ್ನದವರಿಗೆ ಮಾರ್ಕಿಗಳನ್ನು ಹಾಕಿ ವ್ಯವಸ್ಥೆ ಮಾಡಲಾಗಿತ್ತು. ಆಕಸ್ಮಿತ್ತಾಗಿ ಹುಝೂರ್(ಅಬಿಅ) ತನ್ನ ನಡುವೆ ಬರುವುದನ್ನು ನೋಡಿ ಲಜ್ನ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಲಜ್ನಗಳ ಮಾರ್ಕಿಗಳಲ್ಲದೆ ಹುಝೂರ್(ಅಬಿಅ) ಸಭಾಂಗಣದಲ್ಲಿ ಪ್ರವೇಶ ಮಾಡಿದರು.

ಮಹದಿಯಾಬಾದಿನ ಈ ಭೂಭಾಗದಲ್ಲಿ ಮಸೀದಿ ಹಾಗೂ ಜಮಾಅತ್ತಿನ ಕೇಂದ್ರಸ್ಥಳವು ಇದೆ. ಈ ಭೂಭಾಗದ ಒಂದು ಭಾಗದಲ್ಲಿ ಹಲವು (plots) ಗಳನ್ನು ಮಾಡಲಾಗಿದೆ. ಜಮಾಅತ್ ಬಾಂಧವರು ಅದನ್ನು ಪಡೆದುಕೊಂಡು ವಸತಿ ಗೃಹವನ್ನು ನಿರ್ಮಿಸಬಹುದು. ಅಲ್ಲಿ ಅಖೀಮ್ ಬಟ್ ಸಾಹಿಬರು ತನ್ನ ಮನೆಯನ್ನು ನಿರ್ಮಿಸುತ್ತಿದ್ದಾರೆ. ಹುಝೂರ್(ಅಬಿಅ) ಅವರ ಮನೆಗೂ ಹೋದರು. ಮತ್ತು ಅಖೀಮ್ ಬಟ್ ಸಾಹಿಬರೊಡನೆ ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು.

ಅನಂತರ 2 ಗಂಟೆಗೆ ಹುಝೂರ್(ಅಬಿಅ) "ಮಸ್ಜಿದ್ ಬೈತುಲ್ ಬಸೀರ್‌ಗೆ ಆಗಮಿಸಿ ಝುಹರ್, ಅಸರ್ ನಮಾಝುಗಳನ್ನು ಜಮಾ ಮಾಡಿಸಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯದತ್ತ ತೆರಳುತ್ತ ಹುಝೂರ್(ಅಬಿಅ) ಮುಕರ್ರಮ್ ಹಬೀಬುಲ್ಲಾಹ್ ತಾರಿಖ್ ಸಾಹಿಬ್ ಅವರ ಹೊಸ ಇಟಾಲಿಯನ್ ವಾಹನವನ್ನು ವೀಕ್ಷಿಸಿದರು ಮತ್ತು ಹುಝೂರ್(ಅಬಿಅ) ಪ್ರೀತಿಯಿಂದ ಕೆಲ ಸಮಯ ವಾಹನ ಉಪಯೋಗಿಸಿ ಆ ವಾಹನದ ಕುರಿತು ಮಾಹಿತಿಯನ್ನು ಪಡೆದರು. ಅನಂತರ ತಮ್ಮ ವಸತಿಯತ್ತ ತೆರಳಿದರು.

**ಮಸ್ಜಿದ್ 'ಬೈತುಲ್ ಬಸೀರ್" ಉದ್ಘಾಟನಾ ಸಮಾರಂಭ**

ಕಾರ್ಯಕ್ರಮದನ್ವಯ ಮಸ್ಜಿದ್ ಬೈತುಲ್ ಬಸೀರ್ ಮಹದಿಯಾಬಾದಿನ ಉದ್ಘಾಟನಾ ಸಮಾರಂಭವು ಮಸೀದಿಯ ಆವರಣದಲ್ಲಿ ಮಾರ್ಕಿಗಳನ್ನು ಹಾಕಿ ಏರ್ಪಡಿಸಲಾಗಿತ್ತು. 4 ಗಂಟೆ 45 ನಿಮಿಷಕ್ಕೆ ಹುಝೂರ್(ಅಬಿಅ) ಮಾರ್ಕಿಗೆ ಆಗಮಿಸಿದರು. ಇಂದಿನ ಈ ಸಮಾರಂಭದಲ್ಲಿ ಭಾಗವಹಿಸಿದವರ ಅತಿಥಿಗಳ ಸಂಖ್ಯೆ 170 ಆಗಿತ್ತು. ಅವರಲ್ಲಿ:

| |
|---|
| Mr. Gero Storjohann<br>member of national assembly |
| Mrs Elke Christine<br>Lord mayor of Nordersted. |
| Mrs. Kristine Eickhoff-Weber<br>Dpty. state speaker. |
| Mr. Toblas von der heide<br>Member of parliament. |
| Mr. stefen Weber<br>Member of parliament. |
| Mrs. Karla Frieben-Wischer<br>member of ministry Scheiswig |
| Mr. Manfred<br>Mayor of Nahe |
| Mr. Marc Andre Ehiers<br>mayor of Nahe |
| Mayor Henstedt-Ulzburg |
| Mayor Kayhude |
| Mayor lisdorf |
| Mr. Jsochim Brunkhorst.<br>President of district parliament.<br>Badsegeber |

ಅವರಲ್ಲದೆ ಜಿಲ್ಲಾ ಪಾರ್ಲಿಮೆಂಟಿನ ಮೂರು ಚೇರ್‌ಮನ್‌ಗಳು, ಕ್ಷೇತ್ರದ ಪಾದರಿಗಳು, Head of State chancellary, Professors, Doectors, ಶಿಕ್ಷಕವರ್ಗ ಮತ್ತು ಜೀವನದ ವಿವಿಧ ವಿಭಾಗಗಳಿಂದ ಸಂಬಂಧಿಸಿದ ಜನರು ಭಾಗವಹಿಸಿದ್ದರು.

ಕಾರ್ಯಕ್ರಮದ ಆರಂಭವು ಖುರ್‌ಆನ್ ಪಠಣದೊಂದಿಗೆ ಆಯಿತು. ಮುಕರ್ರಮ್ ತಯ್ಯಬ್ ಸಿದ್ಧೀಖ್ ಸಾಹಿಬ್ ಅದನ್ನು ನೆರವೇರಿಸಿಕೊಟ್ಟರು. ಅನಂತರ ಮುಕರ್ರಮ್ ದಾನಿಯಾಲ್ ವದೂದ್ ಸಾಹಿಬ್ ಜರ್ಮನ್ ಅನುವಾದ ಪ್ರಸ್ತುತಪಡಿಸಿದರು.

ಅನಂತರ ಮುಕರ್ರಮ್ ಅಬ್ದುಲ್ಲ ವಾಗಸ್ ಹೌಝೂರ್ ಸಾಹಿಬ್ ಅಮೀರ್ ಜಮಾಅತ್ ಜರ್ಮನಿ ತನ್ನ ಪರಿಚಯ ಮತ್ತು ಸ್ವಾಗತ ಭಾಷಣವನ್ನು ಪ್ರಸ್ತುತಪಡಿಸಿದರು. ಅವರು ಹೇಳಿದರು. Nahe ಊರಿನ ಜನಸಂಖ್ಯೆ ಸುಮಾರು ಎರಡು ಸಾವಿರ ಸಮೀಪವಿದೆ. ಈ ಊರಿನ ಇತಿಹಾಸವು ಹತ್ತು ಸಾವಿರ ವರ್ಷಗಳಿಗಿಂತ ಪುರಾತನವಾಗಿದೆ ಎಂದು ತಿಳಿದು ಬರುತ್ತದೆ.

Nahe ಯಲ್ಲಿ ಅಹ್ಮದಿಯರು ಜಮಾಅತಿನ 1980 ರಲ್ಲಿ ಸ್ಥಾಪನೆಗೊಂಡಿದೆ Bad Segeberg ಮತ್ತು Nondenstedt ರಲ್ಲಿ ವಾಸಿಸುತ್ತಿದ್ದರು. ಅನಂತರ ಜಮಾಅತಿನ ಸಂಖ್ಯೆ ಬೆಳೆಯುತ್ತ ಹೋಯಿತು. ಅಲ್ಲಿಂದ ಮಸೀದಿಗೋಸ್ಕರ ಒಂದು ಸೂಕ್ತವಾದ ಸ್ಥಳ ಹುಡುಕಲು ಪ್ರಾರಂಭಿಸಿದರು ಪ್ರಸಕ್ತ ಸ್ಥಳವು ಜಮಾಅತ್ 1989 ರಲ್ಲಿ ಆರು ಲಕ್ಷ ಮಾರ್ಕ್‌ಗಳಲ್ಲಿ ಖರೀದಿಸಿದ್ದರು. ಅದರ ಒಟ್ಟು ವಿಸ್ತೀರ್ಣ 42,87 ಹೆಕ್ಟೇರ್ ಆಗಿತ್ತು.

ಅಮೀರ್ ಸಾಹಿಬ್ ಮಸೀದಿಯ ಪರಿಚಯ ನೀಡುತ್ತ ಹೇಳಿದರು. 14 ಜೂನ್ 2011 ರಂದು ಹುಝೂರ್(ಅಬಿಅ) ಈ ಮಸೀದಿಯ ಅಡಿಗಲ್ಲು ಹಾಕಿದ್ದರು.

2017 ರಲ್ಲಿ ನಿರ್ಮಾಣ ಕಾರ್ಯ ಆರಂಭವಾಯಿತು. ಈ ಮಸೀದಿಯು 395 ಚ.ಮಿ ನಲ್ಲಿ ನಿರ್ಮಾಣವಾಗಿದೆ. ಸಂಪೂರ್ಣ ತುಂಬ ದೊಡ್ಡದಾಗಿದೆ. ಈ ಮಸೀದಿಯು ಮೂರು ಅಂತಸ್ತಿನದ್ದಾಗಿದೆ. ಮಸೀದಿ ನಿರ್ಮಾಣದಲ್ಲಿ ಒಟ್ಟು 5 ಲಕ್ಷ 60 ಸಾವಿರ ಯೂರೋ ಖರ್ಚಾಗಿದೆ. ಸ್ಥಳಿಯ ಜಮಾಅತ್ ಅದರ ಮೂರನೇ ಭಾಗದಷ್ಟು ಖರ್ಚು ವಹಿಸಿಕೊಂಡಿದೆ.

ಅನಂತರ Gustav Lonenburg ಸಾಹಿಬ್ ತನ್ನ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರು lieutenant colonel ಆಗಿದ್ದಾರೆ. ಅವರು ಪ್ರಪ್ರಥಮವಾಗಿ ಹುಝೂರ್(ಅಬಿಅ) ರಿಗೆ ಸ್ವಾಗತ ಕೋರಿದ ನಂತರ ಹೇಳಿದರು.

30 ವರ್ಷಗಳ ಹಿಂದೆ ಜಮಾಅತ್ ಈ plot ಖರೀದಿಸಿದಾಗ ನಾನು ನನ್ನ ಕುಟುಂಬ ಸಮೇತ ಅಲ್ಲೆ ಇರುತ್ತಿದ್ದೆ. ಆಗ ನಮಗೆ ಅಹ್ಮದಿಯರು ಯಾರು ಹೇಗೆಂಬುದೇ ನಮಗೆ ತಿಳಿದಿರಲಿಲ್ಲ. ನಿಮ್ಮ ಘೋಷವಾಕ್ಯ "ಪ್ರೀತಿ ಎಲ್ಲರೊಂದಿಗೂ ದ್ವೇಷ ಯಾರೊಂದಿಗೂ ಇಲ್ಲ." ಕೇಳಿದಾಗ ಅದೊಂದು ನಿಮ್ಮ ಜನರ ಮುಖವಾಡ ಅಷ್ಟೇ ಎಂದು ಬಾವಿಸಿದ್ದೆ. ಆದರೆ ಈ ಮಸೀದಿಯ

ಉದ್ಘಾಟನಾ ಸಮಾರಂಭದಲ್ಲಿ ನಾವೆಲ್ಲರೂ ಇಂದು ಸೇರಿದ್ದೇವೆ. ಅಂತೆಯೇ ಒಂದು ದೀರ್ಘವಾದ ಸಮಯ ನಿಮ್ಮೊಡನೆ ಇದ್ದ ಕಾರಣ ಹಲವು ಆತಂಕಗಳು ದೂರವಾಗಿವೆ. ದ್ವೇಷ ಹೊರಡುವ ಜನರ ತಪ್ಪು ಸಂದೇಶಗಳು ಇಂದು ಕೊನೆಗೊಳ್ಳುತ್ತವೆ. ಈಗಂತೂ ಪಾಕಿಸ್ತಾನದಿಂದ ವಲಸಿಗರಾಗಿ ಇಲ್ಲಿ ಬಂದವರ ಒಂದು ಪೀಳಿಗೆ ಇಲ್ಲಿ ಜನ್ಮ ಪಡೆದಿವೆ. ಇಲ್ಲೇ ಅವರು ವಿದ್ಯೆ ಪಡೆದಿದ್ದಾರೆ. ಮತ್ತು ಇಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ನಾವೆಲ್ಲರೂ ಜರ್ಮನ್ ಸಂವಿಧಾನವನ್ನು ಮನ್ನಿಸುತ್ತೇವೆ. ಅದರ ಮೌಲ್ಯಗಳನ್ನು ಎತ್ತಿ ಹಿಡಿಯುತ್ತೇವೆ. ಆ ಮೌಲ್ಯಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವು ಒಂದಾಗಿದೆ. ಅದೇ ರೀತಿ ಸ್ತ್ರೀ ಪುರುಷರಿಗೆ ಸಮಾನವಾದ ಸ್ಥಾನ ದೊರೆಯಬೇಕಾಗಿದೆ.

ಮತ್ತು ಅವರು ಹೇಳಿದರು. ಜಮಾಅತ್‌ನೊಂದಿಗೆ ಸದಾ ಒಳ್ಳೆಯ ಸಂಪರ್ಕವಿದೆ. ಯಾವಾಗಲೂ ನಾವು ಜಮಾಅತ್ತಿನ ಪರವಾಗಿ ಧ್ವನಿ ಎತ್ತಿದ್ದೇವೆ. ಐಕ್ಯತೆ ಸಾಧಿಸುವುದು ಒಂದು ನಿರಂತರವಾದ ಕೆಲಸವಾಗಿದೆ. ಅದನ್ನು ಜಾರಿಯಾಗಿರಿಸಬೇಕಾಗಿದೆ. ನಮಗೆ ಅಹ್ಮದಿಯರ ಜೊತೆಯಲ್ಲಿದ್ದು ಹಲವು ವಿಷಯಗಳನ್ನು ತಿಳಿಯಲು ಮತ್ತು ಕಲಿಯಲು ಅವಕಾಶ ದೊರೆತಿದೆ. "ಪ್ರೀತಿ ಎಲ್ಲರಿಗಾಗಿ ದ್ವೇಷವಿಲ್ಲ ಯಾರೊಂದಿಗೂ ಇಲ್ಲ" ಘೋಷವಾಕ್ಯವು ಕೇವಲ ಘೋಷಣೆಯಲ್ಲ. ಅದು ಅಹ್ಮದಿಯರ ಕಾರ್ಯಶೈಲಿಯಾಗಿದೆ ಎಂಬ ಸತ್ಯ ಸ್ಪಷ್ಟವಾಯಿತು. ನಮಗೆ ಇದು ಗೌರವದ ವಿಷಯವಾಗಿದೆ. ನಾವು ಕ್ರೈಸ್ತರಾಗಿಯೂ ತಮ್ಮ ನೆರೆಹೊರೆಯವರ ಕಠಿಣ ಸಮಯದಲ್ಲಿ ನೆರವಾಗಿದ್ದೇವೆ ಎಂದು. ಇಂದು ನಮಗೆ ಸಂತೋಷವು ಆಗುತ್ತಿದೆ ಮತ್ತು ಕೃತಜ್ಞತೆಯು ಅರ್ಪಿಸಬೇಕಾಗಿದೆ. ಶುಭಾಶಯವು ಸಲ್ಲಿಸಬೇಕಾಗಿದೆ. ಇಷ್ಟೊಂದು ಸುಂದರವಾದ ಮಸೀದಿ ನಮ್ಮಲ್ಲಿ ನಿರ್ಮಾಣವಾಗಿದೆ. ಇಂದಿನ ದಿವಸವು ನನಗಾಗಿ ಮತ್ತು ನನ್ನ ಪತ್ನಿಗೂ ಒಂದು ಅತ್ಯಂತ ಮುಖ್ಯವಾದ ದಿನವಾಗಿದೆ. ಏಕೆಂದರೆ ಮೊದಲಿನಿಂದಲೂ ನಾವು ಈ ಕಾರ್ಯದಲ್ಲಿ ಭಾಗಿಯಾಗಿರುತ್ತೇವೆ.

ಅನಂತರ Susanna Hahn ಸಾಹಿಬಾ ಅವರು ಒಂದು evangelical lutheran ಚರ್ಚಿನ ಪಾದರಿಯಾಗಿದ್ದಾರೆ. ತನ್ನ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರು ಮೊಟ್ಟ ಮೊದಲು ಹುಝೂರ್(ಅಬಾ) ರಿಗೆ ಮತ್ತು ಇತರ ಉಪಸ್ಥಿತರಿಗೆ ಸಲಾಂ ಹೇಳಿದರು ಮತ್ತು ಮಸೀದಿಯ ಉದ್ಘಾಟನ ನಿಮಿತ್ತ ಶುಭಾಶಯಗಳನ್ನು ಅರ್ಪಿಸಿದರು.

ಅವರು ಹೇಳಿದರು. ಮಸೀದಿಯ ಉದ್ಘಾಟನ ಸಮಯದವರೆಗೆ ಇದೊಂದು ದೀರ್ಘ ಕಾರ್ಯವಾಗಿತ್ತು. ನನಗೆ ಇಲ್ಲಿ 5 ವರ್ಷಗಳಿಂದ ಪಾದರಿಯಾಗಿ ಕೆಲಸ ನಿರ್ವಹಿಸುವ ಅವಕಾಶ ದೊರೆಯುತ್ತಿದೆ. ಪ್ರತಿ ವರ್ಷ ನಾವು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬಳಿ ತಮ್ಮ ಯುವಕರ ಜೊತೆಗೂಡಿ ಬರುತ್ತೇವೆ. ತಮ್ಮ ಧರ್ಮವಲ್ಲದೆ ಇತರರನ್ನು ತಿಳಿದುಕೊಳ್ಳಲು ಇದೊಂದು ಒಳ್ಳೆಯ ಸಂದರ್ಭವಾಗಿರುತ್ತದೆ ಯವಾಗಲೂ ತುಂಬ ಪ್ರೀತಿಯಿಂದ ನಮ್ಮೆಲ್ಲರೊಡನೆ ವ್ಯವಹರಿಸುತ್ತೀರಿ. ನಮ್ಮನ್ನು ಸ್ವಾಗತಿಸುತ್ತೀರಿ. ನೀವು ಯುವಕರಿಗೆ ಪ್ರಶ್ನೆಗಳನ್ನು ಕೇಳುವ ಅವಕಾಶ ನೀಡುತ್ತೀರಿ. ಯುವಕರಿಗೆ ಆರಾಧನೆಯ ರೀತಿಯನ್ನು ತೋರಿಸಿಕೊಡುತ್ತೀರಿ. ಅದು ಅವರನ್ನು ಪ್ರಭಾವಿತನಾಗಿ ಮಾಡುತ್ತದೆ.

ಮತ್ತೆ ಅವರು ಹೇಳಿದರು. ಇಂದಿನ ಕಾಲದಲ್ಲಿ ಏಕದೇವನ ಮಂದಿರ ಮತ್ತು ಆರಾಧನಾ ಸ್ಥಳ ನಿರ್ಮಿಸುವುದು ಒಳ್ಳೆಯ ಬೆಳವಣಿಗೆಯಾಗಿದೆ. ಅಲ್ಲಾಹನ ಈ ಆರಾಧನ ಮಂದಿರದಲ್ಲಿ ಎಲ್ಲಾ ಜನರು ಒಟ್ಟು ಗೂಡುತ್ತಾರೆ. ಪರಸ್ಪರ ಮಾತನಾಡುವ ಅವಕಾಶ ದೊರೆಯುತ್ತದೆ. ಒಳ್ಳೆಯ ಆರಾಧನ ಸ್ಥಳವು ಇದೆ. ನಾವೆಲ್ಲರೂ ಅಲ್ಲಾಹನ ಮೇಲೆ ವಿಶ್ವಾಸ ಹೊಂದಿದವರಾಗಿದ್ದೇವೆ. ಅವನೇ ನಮ್ಮನ್ನು ಜೀವನ ನೀಡಿರುವವನು. ಅವನೇ ನಮ್ಮನ್ನು ರಕ್ಷಿಸುವವನು. ನಿಸ್ಸಂದೇಹವಾಗಿ ವಿವಿಧ ರೀತಿಯಲ್ಲಿ ನಾವು ಅಭಿವ್ಯಕ್ತಗೊಳಿಸುತ್ತೇವೆ. ಆದರೂ ನಾವೆಲ್ಲರೂ ಸೇರಿ ಅದನ್ನು ಪ್ರಚುರಪಡಿಸುತ್ತೇವೆ. ಇದು ಇಂದಿನ ಕಾಲಕ್ಕೆ ಬಹಳ ಅನಿವಾರ್ಯವಾಗಿದೆ. ನಾವೆಲ್ಲರೂ ದ್ವೇಷಗಳ ವಿರುದ್ಧ ತನ್ನ ಧ್ವನಿ ಎತ್ತುವುದೂ ಅನಿವಾರ್ಯವಾಗಿದೆ. ಈ ಮಸೀದಿಗೆ ಬರುವವರೆಲ್ಲರಿಗೂ ಈ ಕಾರ್ಯ ಶುಭವಾಗಲಿ.

ಕೊನೆಯಲ್ಲಿ ಅವರು ಹೇಳಿದರು. ಈಗ ನಮ್ಮೆಲ್ಲರ ಕಾರ್ಯವೆಂದರೆ ನಾವು ಪರಸ್ಪರ ಗೌರವಿಸಬೇಕು. ಮತ್ತು ನಾವೆಲ್ಲರು ಅಲ್ಲಾಹನ ದಾಸರಾಗಿದ್ದೇವೆ ಮತ್ತು ಅವನೆ ನಮ್ಮ ಪ್ರಭುವಾಗಿದ್ದಾನೆ ಎಂಬ ಸತ್ಯ ಮರೆಯಬಾರದು.

ಅನಂತರ Eike Christina Roder ಸಾಹಿಬಾ ಅವರು Nordensted ನ Lord Mayor ಆಗಿರುವರು. ತಮ್ಮ ಪರಿಚಯ ಭಾಷಣದಲ್ಲಿ ಹೇಳಿದರು. ಮೊಟ್ಟ ಮೊದಲಾಗಿ ಅವರು ಹುಝೂರ್(ಅಬಾ) ರಿಗೆ ಮತ್ತು ಇತರ ಉಪಸ್ಥಿತರಿಗೆ ಸಲಾಂ ಹೇಳಿದರು. ಮತ್ತು ಒಳ್ಳೆಯ ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದಕ್ಕೆ ಕೃತಜ್ಞತೆ ಅರ್ಪಿಸಿದರು. ಅದೇ ರೀತಿ Nordenstedt ನಗರ ವತಿಯಿಂದ ಸಲಾಂ ಪ್ರಸ್ತುತಪಡಿಸಿದರು. ಮಸೀದಿಯ ಉದ್ಘಾಟನಾ ಸಮಾರಂಭ ನಿಮಿತ್ತು ಶುಭಾಶಯಗಳನ್ನು ಸಲ್ಲಿಸಿದರು.

ಅವರು ಹೇಳಿದರು. ಹಲವು ವರ್ಷಗಳಿಂದ ನೀವು ಈ ನಿರ್ಮಾಣ ಕಾರ್ಯದಲ್ಲಿ ತೊಡಗಿ ಕೊಂಡಿದ್ದರು. ನಿಮ್ಮಲ್ಲಿ ಹಲವರು ಇದಕ್ಕಾಗಿ ಶ್ರಮಪಟ್ಟಿರುವರು. ನಿಸ್ಸಂದೇಹವಾಗಿ ಈ ಕಾರ್ಯದಲ್ಲಿ Nordentedt ರ ನಾಗರಿಕರು ಶಾಮೀಲಾಗಿದ್ದಾರೆ. ತಾವೆಲ್ಲರೂ ಈ ದಿನವನ್ನು ನಿರೀಕ್ಷಿಸುವವರಾಗಿದ್ದರು.

ಅವರು ಹೇಳಿದರು ಜರ್ಮನಿಯಲ್ಲಿ ಒಂದು ನುಡಿಗಟ್ಟಿದೆ ಯಾವ ವಸ್ತು ನಿರ್ಮಾಣಗೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆಯೋ ಅದು ಪರಿಪಕ್ವತೆ ಹೊಂದಿರುತ್ತವೆ ಎಂದು. ಆ ನೆಲೆಯಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಈ ಮಸೀದಿಯೂ ಅತ್ಯುತ್ತಮವಾಗಿರಲಿ ಎಂದು ಆಶಿಸುತ್ತೇನೆ. ಈ ಮಸೀದಿಯು ನೀವು ಬಯಸಿದಂತೆ ಒಳ್ಳೆಯ ಆರಾಧನ ಸ್ಥಳವಾಗಿರಲಿ. ಈ ಮಸೀದಿಯು ಅಲ್ಲಾಹನ ಭಯ ಮತ್ತು ಆಧ್ಯಾತ್ಮಿಕ ಪರಿಸರ ಉಂಟುಮಾಡುವಂತಿರಲಿ. ಇದರಿಂದ ಸದಾ ಶಾಂತಿ ಹರಡುವಂತಾಗಲಿ.

ಮತ್ತೆ ಅವರು ಹೇಳಿದರು. ಒಂದು ದೀರ್ಘವಾದ ಅವಧಿಯಿಂದ ನೀವು ನಮ್ಮ ಸಮಾಜದ ಒಂದು ಅಂಗವಾಗಿ ಕೆಲಸ ನಿರ್ವಹಿಸುತ್ತ ಇದ್ದಿರಿ ಹಾಗೂ ಸೇವೆಯೂ ಸಲ್ಲಿಸುತ್ತಿದ್ದೀರಿ. ಇಂದಿನ ಕಾಲದಲ್ಲಿ ಉಗ್ರವಾದ ಹಿಂಸೆಯನ್ನು ಪ್ರಚೋದಿಸುವ ಮುಖಂಡರುಗಳನ್ನು ನಾವು ಕಾಣುತ್ತಿದ್ದೇವೆ. ನಮ್ಮ ಕರ್ತವ್ಯವೇನೆಂದರೆ ಪ್ರತಿ ಧರ್ಮ, ಪ್ರತಿ ಸಂಸ್ಕೃತಿಯು ಇಲ್ಲಿ ಶಾಂತಿಯಿಂದ ಇರಬಯಸುತ್ತಾರೆ ಎಂದು ಲೋಕಕ್ಕೆ ತಿಳಿಯ ಬಯಸಬೇಕಾಗಿದೆ. ಪ್ರೀತಿ, ಸ್ನೇಹ, ಒಬ್ಬರು ಮತ್ತೊಬ್ಬರನ್ನು ಗೌರವಿಸುವುದು ಪ್ರಾಥಮಿಕತೆ ಹೊಂದಿದ ವಿಷಯಗಳಾಗಿವೆ. ಅದರಿಂದ ಶಾಂತಿ ಸ್ಥಾಪನೆಯಾಗಲು, ಐಕ್ಯತೆ ಮೂಡಲು ಸಾಧ್ಯ. ಇದು ನಮ್ಮೆಲ್ಲರ ಬಯಕೆಯಾಗಿದೆ. ಧನ್ಯವಾದಗಳು.

ಅನಂತರ Tobias Von den Heide ಸಾಹಿಬ್ ಅವರು ರಾಜ್ಯ ಅಸೆಂಬ್ಲಿ ಸದಸ್ಯರಾಗಿದ್ದಾರೆ. ಅವರು ತಮ್ಮ ಪರಿಚಯ ಭಾಷಣದಲ್ಲಿ ಹೇಳಿದರು. ಅವರು ಮೊಟ್ಟ ಮೊದಲಿಗೆ ಹುಝೂರ್(ಅಬಾ) ರಿಗೆ ಮತ್ತು ಇರ ಉಪಸ್ಥಿತರಿಗೆ ಸಲಾಂ ಹೇಳಿದರು. ಮತ್ತು ಅವರು ಹೇಳಿದರು. ನಾನು Kiel ಯಿಂದ ಈ ಕಾರ್ಯಕ್ರಮಕ್ಕೆ ಭಾಗವಹಿಸಿರುತ್ತೇನೆ. ನನಗೆ ತುಮಬ ಸಂತೋಷವಾಗುತ್ತಿದೆ. ಇಲ್ಲಿ ಕೇವಲ ಅಹ್ಮದಿಯ ಮುಸ್ಲಿಮ್ ಜಮಾಅತಿನ ಸದಸ್ಯರು ಭಾಗವಹಿಸುತ್ತಿಲ್ಲ. ಬದಲಾಗಿ ಹಲವು ಸ್ಥಳೀಯ ಅಸೆಂಬ್ಲಿಯ ರಾಜಕಾರಣಿಗಳು ಮತ್ತು ನೆರೆಯವರು ಇಲ್ಲಿ ಭಾಗವಹಿಸಿರುತ್ತಾರೆ.

ಅವರು ಹೇಳಿದರು: ಅಹ್ಮದಿಯ ಮುಸ್ಲಿಮ್ ಜಮಾಅತ್ Schleswig Hoistein ರಾಜ್ಯದಲ್ಲಿ ಒಂದು ಅತ್ಯಂತ ಮುಖ್ಯ Partner ಆಗಿರುತ್ತದೆ. ಅದಕ್ಕೆ ಒಂದು ಮುಖ್ಯವಾದ ಕಾರಣವೇನೆಂದರೆ ಅವರ ಶಾಂತಿ ಸ್ಥಾಪಿಸುವ ಕಾರ್ಯ ನಮ್ಮ ದೃಷ್ಟಿಕೋನಕ್ಕೆ ಹೋಲಿಕೆಯಾಗಿದೆ. ಅದರಲ್ಲಿ ಅತ್ಯಂತ ಮುಖ್ಯವಾದ ಅಂಗ ರಹ್ಮಾನಿಯತ್ ಗುಣವಾಗಿದೆ. ಮತ್ತು ನ್ಯಾಯವು ನಿಮ್ಮ ಶಿಕ್ಷಣದ ಭಾಗವಾಗಿದೆ. ಸ್ತ್ರೀ ಪುರುಷರಲ್ಲಿ ಸಮಾನತೆ, ಧರ್ಮ ಮತ್ತು ಸರಕಾರದೊಡನೆ ಪ್ರತ್ಯೇಕವಾಗಿರುವ ವಿಶ್ವಾಸ, ಎಲ್ಲ ರೀತಿಯ ಹಿಂಸೆಯಿಂದ ದೂರವಾಗಿರುವುದು. ಇವೆಲ್ಲ ಮೌಲ್ಯಗಳು ನಮ್ಮಲ್ಲಿರುವಂತೆಯೇ ಆಗಿವೆ. ಇದರ ಒಂದು ಮುಖ್ಯವಾದ ವಿಷಯವೆಂದರೆ ನೀವು ಇವೆಲ್ಲ ಮಾತುಗಳನ್ನು ಗೌಪ್ಯವಾಗಿಡುದಿಲ್ಲ. ಬದಲಾಗಿ ಎಲ್ಲ ಮನುಷ್ಯರೊಡನೆ ಪ್ರೀತಿ ಸ್ನೇಹದಿಂದ ವ್ಯವಹಾರ ಮಾಡುತ್ತೀರಿ. ನಮ್ಮೆಲ್ಲರ ಜೊತೆ ಮಿತ್ರರೊಬ್ಬರಿದ್ದಾರೆ ಅವರು ನಮ್ಮ ಸಮಸ್ಯೆಗಳನ್ನು ಪರಿಹರಿಸುತ್ತಾನೆ ಮತ್ತು ನಮ್ಮ ಅತಿಥ್ಯ ವಹಿಸುತ್ತಾನೆ. ತಾವು ಯವಾಗಲೂ ತಮ್ಮ ಕಾರ್ಯಕ್ರಮಗಳಲ್ಲಿ ನಮ್ಮನ್ನು ಆಹ್ವಾನಿಸುತ್ತೀರಿ. Posters ಮೂಲಕ ತಮ್ಮ ಸಂದೇಶ ಇತರರವರೆಗೆ ತಲುಪಿಸುತ್ತೀರಿ. ತಾವುಗಳು ನಮ್ಮ ಸಮಾಜದ ಒಂದು ಅಂಗವಾಗಿರುತ್ತದೆ ಮತ್ತು ನಿಮಗೆ Korperschaft offentlichen Rechts ದರ್ಜೆ ಲಭಿಸಿರುತ್ತದೆ. (ಅಂದರೆ ಸರಕಾರದ ನೆಲೆಯಲ್ಲಿ ನಿಮಗೆ ಚರ್ಚಿನ ಸಮಾನ ದರ್ಜೆ ಲಭ್ಯವಿರುತ್ತದೆ) ಇದೇನು ಸಾಧಾರಣ ಮಾತಲ್ಲ. ಹಲವು ಜಮಾಅತ್ತುಗಳು ಮತ್ತು ಸಂಸ್ಥೆಗಳು ಇಲ್ಲಿಯವರೆಗೆ ಈ ಪ್ರಯತ್ನದಲ್ಲಿವೆ. ಆದರೆ ಅದರಿಂದ ಕೇವಲ ಸ್ಪಷ್ಟವಾಗುವುದೇನೆಂದರೆ ನೀವು ನಮ್ಮ ಸಂವಿಧಾನ ರೀತ್ಯ ನಡೆದುಕೊಳ್ಳುತ್ತೀರಿ. ನೀವು ನನ್ನ ದೃಷ್ಟಿಯಲ್ಲಿ ಇಸ್ಲಾಮ್ ಜರ್ಮನಿಯ ಒಂದು ಭಾಗವಾಗಿದೆ ಎಂಬುದಕ್ಕೆ ಒಂದು ಉದಾಹರಣೆಯಾಗಿದ್ದೀರಿ. ನಾವೆಲ್ಲ, ಇಸ್ಲಾಮ್ ಜರ್ಮನಿಯ ಒಂದು ಭಾಗವಾಗಲು ಸಾಧ್ಯವೇ ಇಲ್ಲ ಎಂದು ಭಾವಿಸುತ್ತಿದ್ದೆವು ಆದರೆ ಇಂದು ಅದು ಸಾಧ್ಯವಾಗಿದೆ.

(ಮುಂದುವರಿಯುವುದು)

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Vol No.1 Thursday, 25 June 2020 Issue No. 24

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 23ರ ವರದಿಯ ಉಳಿದ ಭಾಗ)**

### ಹುಝೂರರ ಅನುಗ್ರಹಪೂರ್ಣ ಉಪಸ್ಥಿತಿಯಲ್ಲಿ ನಿಕಾಹಗಳ ಘೋಷಣೆ

ನಮಾಝುಗಳ ನಿರ್ವಹಣೆಯ ನಂತರ ಮುಕರ್‍ರಮ್ ಸದಾಬತ್ ಅಹ್ಮದ್ ಸಾಹಿಬ್ ಮುಬಲ್ಲಿಗ್ ಇನ್‌ಚಾರ್ಜ್ ಜರ್ಮನಿ ಅವರು ಕೆಳಗೆ ನಮೂದಿತ 4 ವಿವಾಹ ಘೋಷಣೆ ಮಾಡಿದರು. ಹುಝೂರ್ ಅನುಗ್ರಹದ ರೀತಿಯಲ್ಲಿ ಅವರ ಮಧ್ಯೆ ಉಪಸ್ಥಿತರಿದ್ದರು.

- ಅಝೀಝು ಖುರ್‍ರತುಲ್ ಐನ್ ಬಿನ್ತ್ ಮುಕರ್‍ರಮ್ ಹಫೀಝ್ ಅಹ್ಮದ್ ಖುರೈಶಿ ಸಾಹೆಬ್‌ರವರ ನಿಕಾಹ್ ಅಝೀಝುಮ್ ರಿಝ್ವಾನ್ ಮಲಿಕ್ ಸಾಹೆಬ್ ಇಬ್ನೆ ಅರ್‌ಶದ್ ಅಹ್ಮದ್ ಶಹ್ಬಾಝ್ ಸಾಹೆಬ್ ಅವರಿಂದಾಯಿತು.
- ಅಝೀಝು ನೈಲಾ ಕಂವಲ್ ಬಿನ್ತ್ ಶಬ್ಬೀರ್ ಅಹ್ಮದ್ ಖ್ವಾಜ ಸಾಹಿನರವರ ನಿಕಾಹ್ ಅಝೀಝುಮ್ ಮಿಸ್ಬಾಹುದ್ದೀನ್ ಸೈಫ್ ಇಬ್ನ ಫಲಾಹುದ್ದೀನ್ ಸೈಫ್ ಸಾಹೆಬ್ ಮರ್‌ಹೂಮ್‌ರವರಿಂದಾಯಿತು.
- ಅಝೀಝು ಲುಬ್ನಾ ತಾರಿಖ಼ ಬಿನ್ತ್ ತಾರಿಖ್ ಮಹ್ಮೂದ್ ಸಾಹೆರವರ ನಿಕಾಹ್ ಅಝೀಝುಮ್ ಯಾಸಿರ್ ಅಹ್ಮದ್ ಮಲಿಕ್ ಸಾಹೆಬ್‌ರವರಿಂದಾಯಿತು.
- ಅಝೀಝು ಸದಫ್ ಖಾನ್ ಸಾಹಿಬರರವರ ನಿಕಾಹ್ ಅಝೀಝುಮ್ ಅಹದ್ ಜಾನ್ ಖಾನ್ ಸಾಹೆಬ್‌ರವರಿಂದಾಯಿತು.

ಕೊನೆಯಲ್ಲಿ ಅನುಗ್ರಹ ರೀತಿಯಲ್ಲಿ ಹುಝೂರ್ ದುಆ ಮಾಡಿಸಿದರು. ಅನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮಹದಿಯಾಬಾದನ್ನು ಬಹು ಸುಂದರವಾಗಿ ಧ್ವಜಗಳಿಂದ ಮತ್ತು ಬಣ್ಣ ಬಣ್ಣಗಳ ವಿದ್ಯುತ್ ಬಲ್ಬುಗಳಿಂದ ಅಲಂಕರಿಸಲಾಗಿತ್ತು. ಮಸ್ಜಿದ್ ಬೈತುಲ್ ಬಸೀರ್ ಮತ್ತು ಅಕ್ಕಪಕ್ಕದ ಕ್ಷೇತ್ರವು ದೀಪೋತ್ಸವದ ರೀತಿಯಲ್ಲಿ ಕಣ್ಮನ ಸೆಳೆಯುತ್ತಿತ್ತು. ಇಲ್ಲಿ ನಮಾಝ್ ನರ್ವಹಣೆಗಾಗಿ ಮತ್ತು ಊಟ ವಸತಿಗೋಸ್ಕರ ಮೂರು ಮಾರ್ಕಿಗಳನ್ನು ಸಿದ್ಧಪಡಿಸಲಾಗಿತ್ತು. ಪ್ರತಿ ಮಾರ್ಕಿನಲ್ಲಿ ಸುಮಾರು ಒಂದು ಸಾವಿರ ಜನರು ನಮಾಝ್ ನಿರ್ವಹಿಸಬಹುದಾಗಿತ್ತು. ಒಂದು ಮಾರ್ಕಿ ಪುರುಷರಿಗಾಗಿ ಮತ್ತು ಇನ್ನೊಂದು ಮಾರ್ಕಿ ಮಹಿಳೆಯರಿಗಾಗಿ ಮತ್ತು 3ನೇ ಮಾರ್ಕಿ ಊಟದ ವ್ಯವಸ್ಥೆಗಾಗಿ ಸಿದ್ಧಪಡಿಸಲಾಗಿತ್ತು. ನೂರಾರು ಜಮಾಅತ್ ಬಾಂಧವರು ಮತ್ತು ಖುದ್ದಾಮ್ ಯುವಕರು ವಿವಿಧ ವಿಭಾಗಗಳಲ್ಲಿ ಸೇವೆಗಾಗಿ ನಿಯೋಜಿತರಾಗಿದ್ದರು. ಅವರು ಉತ್ತಮ ರೀತಿಯಲ್ಲಿ ತಮ್ಮ ತಮ್ಮ ಕರ್ತವ್ಯಗಳನ್ನು ಪಾಲಿಸುತ್ತಿದ್ದರು. ಅಡುಗೆ ವಿಭಾಗ (ಲಂಗರ್) ವ್ಯವಸ್ಥೆಯು ಜಾರಿಯಲ್ಲಿತ್ತು. ದಿನಾಲು ಸಾವಿರಾರು ಜನರಿಗೆ ಊಟ ತಯಾರಾಗುತ್ತಿತ್ತು. ವಿವಿಧ ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಲಾಗಿತ್ತು.

### ಮಹದಿಯಾಬಾದಿನ ಸಂಕ್ಷಿಪ್ತ ಪರಿಚಯ:

ಮಹದಿಯಾಬಾದ್ ಹೆಂಬಾರ್ಗ್ ನಗರದಿಂದ 30 ಕಿ.ಮೀ ದೂರದಲ್ಲಿ Nahe ಎಂಬ ಗ್ರಾಮ, Segeberg ಜಿಲ್ಲೆಯಲ್ಲಿದೆ. ರಾಜ್ಯದ ಹೆಸರು Schlewig Hoisteim ಎಂದಾಗಿದೆ. ಈ ರಾಜ್ಯವು ಜರ್ಮನಿಯ ಉತ್ತರ ಭಾಗದಲ್ಲಿದ್ದು, ಈ ರಾಜ್ಯದ ರಾಜಧಾನಿ Kiel ಆಗಿದೆ. ಈ ನಗರದ ಒಬ್ಬ ನಾಗರಿಕ ಹಝ್‌ರತ್ ಅಖದಸ್ ಮಸೀಹ ಮೌಊದ್(ಅ) ರವರ ಜೀವಿತದಲ್ಲಿಯೇ ಅವರನ್ನು ಗುರುತಿಸಿ ವಿಶ್ವಾಸ ತಂದ ಭಾಗ್ಯ ಪಡೆದವರಾಗಿದ್ದಾರೆ.

ಮಹದಿಯಾಬಾದಿನ ಈ ಸ್ಥಳವನ್ನು 12 ಜುಲಾಯಿ 1989 ರಂದು 6 ಲಕ್ಷ ಜರ್ಮನ್ ಮಾರ್ಕಿನಲ್ಲಿ ಖರೀದಿಸಲಾಯಿತು. ಮಹದೀಯಾಬಾದ್ ಎರಡು ಭೂಭಾಗದಲ್ಲಿ ವಿಂಗಡಿಸಲ್ಪಟ್ಟಿದೆ. ಒಂದು ಭೂಭಾಗದಲ್ಲಿ ಜಮಾಅತಿನ ಕೇಂದ್ರವಿದೆ. ಇದೀಗ ಇಲ್ಲಿ ಮಸ್ಜಿದ್ ಬೈತುಲ್ ಬಸೀರ್‌ನ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಅದರ ವಿಸ್ತೀರ್ಣ 21,479 ಚ. ಮೀ ಅಂದರೆ 5 ಎಕರೆಗಿಂತ ಹೆಚ್ಚಾಗಿದೆ. ಇನ್ನೊಂದು ಸ್ಥಳವು ಈ ಭೂಭಾಗದಿಂದ 5 ನೂರು ಮೀಟರಿನಷ್ಟು ದೂರದ ಕೃಷಿ ಭೂಮಿಯಾಗಿದೆ, ಅದರ ವಿಸ್ತೀರ್ಣ 1 ಲಕ್ಷ 51 ಸಾವಿರ ಚ. ಮೀ ಆಗಿದೆ. ಎಕರೆಗಳಲ್ಲಿ ಇದರ ವಿಸ್ತೀರ್ಣ 26.37 ಎಕರೆಗಳಾಗುತ್ತವೆ. ಮಹದಿಯಾಬಾದಿನಲ್ಲಿ ಒಂದು ಕಟ್ಟಡ ಮೊದಲೇ ನಿರ್ಮಾಣಗೊಂಡಿದ್ದು ಇದೆ. ಅದರ ಒಂದು ಭಾಗವನ್ನು ವಸತಿಗೋಸ್ಕರ ಮತ್ತು ಒಂದು ಭಾಗದ ಎರಡು ಸಭಾಂಗಣಗಳನ್ನು ದುರಸ್ತಿಗೊಳಿಸಿ ನಮಾಝ್ ಮಾಡಲು ಉಪಯೋಗಿಸುತ್ತಿದ್ದರು. ಇಲ್ಲಿ ಮಸೀದಿ ನಿರ್ಮಾಣದ ಅನುಮತಿ ಪಡೆಯಲು ಒಂದು ದೀರ್ಘ ಸಮಯ ಹಿಡಿಯಿತು. ಸಂಪೂರ್ಣ ಕ್ಷೇತ್ರದ ಒಂದು Master plan ತಯಾರಿಸಿ ಪ್ರಸ್ತುತಪಡಿಸಬೇಕಾಯಿತು. ಕೆಲವು ಶರತ್ತುಗಳೊಂದಿಗೆ ಮಸೀದಿ ನಿರ್ಮಾಣಕ್ಕಾಗಿ ಅನುಮತಿ ದೊರೆತಿದೆ.

ಇಲ್ಲಿ ಮಸೀದಿಯ ಶಂಕುಸ್ಥಾಪನೆಯು ಹುಝೂರ್ ತಮ್ಮ ಜರ್ಮನಿ ಪ್ರವಾಸದ ನಡುವೆ 14 ಜೂನ್ 2011 ರಂದು ನೆರವೇರಿಸಿದ್ದರು. ಈ ವರ್ಷ 2019 ರಲ್ಲಿ ಹಲವು ಅಡೆತಡೆಗಳ ನಿವಾರಣೆ ಆದ ನಂತರ ಈ ಮಸೀದಿಯ ನಿರ್ಮಾಣ ಕಾರ್ಯ ಪೂರ್ಣಗೊಂಡಿತು. ಶುಕ್ರವಾರದ ದಿನದಂದು ಹುಝೂರ್ ಈ ಮಸೀದಿಯನ್ನು ಉದ್ಘಾಟಿಸಿದರು.

ಹುಝೂರ್ ಮುಂಜಾನೆ 7 ಗಂಟೆಗೆ “ಮಸ್ಜಿದ್ ಬೈತುಲ್ ಬಸೀರ್” ಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಮುಂಜಾನೆ ಹುಝೂರ್ ಕಚೇರಿ ಕಾರ್ಯಗಳಲ್ಲಿ ಮಗ್ನರಾಗಿದ್ದರು.

ಮರುದಿನ ಶುಕ್ರವಾರವಾಗಿತ್ತು. ಜುಮುಅ ನಮಾಝ್‌ನೊಂದಿಗೆಯೇ “ಮಸ್ಜಿದ್ ಬೈತುಲ್ ಬಸೀರ್” ಉದ್ಘಾಟಿಸಲ್ಪಡಬೇಕಾಗಿತ್ತು. ಜರ್ಮನಿಯ ವಿವಿಧ ಜಮಾಅತುಗಳಿಂದ ದೊಡ್ಡ ಸಂಖ್ಯೆಯಲ್ಲಿ ಜಮಾಅತ್ ಬಾಂಧವರು ಮುಂಜಾನೆಯಿಂದಲೇ ಮಹದಿಯಾಬಾದ್‌ಗೆ ಬರಲಾರಂಭಿಸಿದ್ದರು. ಕೆಲವು ಜಮಾಅತ್ ಬಾಂಧವರು ಮತ್ತು ಕುಟುಂಬಗಳು ಬಹು ದೀರ್ಘವಾದ ಪ್ರಯಾಣ ಬೆಳೆಸಿ ಬಂದು ತಲುಪಿದ್ದರು. ಹುಝೂರ್‌ರ ನೇತೃತ್ವದಲ್ಲಿ ನಮಾಝ್ ಜುಮಅ ನಿರ್ವಹಿಸಬೇಕೆಂಬ ಹಂಬಲ ಪ್ರತಿಯೊಬ್ಬರಿಗಿತ್ತು. ಅಂತೆಯೇ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಬೇಕು ಎಂಬ ಅಭಿಲಾಷೆಯನ್ನೂ ಹೊಂದಿದ್ದರು.

ಕಾರ್ಯಕ್ರಮದನ್ವಯ 2 ಗಂಟೆಗೆ ಹುಝೂರ್ ಆಗಮಿಸಿದರು. ಮಸೀದಿಯ ಹೊರಾಂಗಣದ ಗೋಡೆಯಲ್ಲಿ ಸ್ಥಾಪಿಸಲಾದ ಉದ್ಘಾಟನಾ ಫಲಕವನ್ನು ಅನಾವರಣಗೊಳಿಸಿದರು. ಅನಂತರ ಹುಝೂರ್ ಬೃಹತ್ ಮಾರ್ಕಿಗೆ ಆಗಮಿಸಿ ಖುತುಬ ಜುಮಅ ನೀಡಿದರು. ಹುಝೂರರ ಈ ಖುತುಬ ಜುಮ್‌ಅ 3 ಗಂಟೆಯವರೆಗೆ ಜಾರಿಯಲ್ಲಿತ್ತು ಮತ್ತು ಅದನ್ನು MTA International ಮೂಲಕ ನೇರ ಪ್ರಸಾರ ಮಾಡಲಾಯಿತು.

ಇಂದು ತಮ್ಮ ಹುಝೂರ್‌ರ ನೇತೃತ್ವದಲ್ಲಿ ಜುಮಅ ನಮಾಝ್ ನಿರ್ವಹಿಸಲು ಅಕ್ಕಪಕ್ಕದ ಜಮಾಅತುಗಳಿಂದ, ವಿಶೇಷವಾಗಿ ಜರ್ಮನಿಯಾದ್ಯಂತದಿಂದ ಅಹ್ಮದಿಯರು ದೊಡ್ಡ ಸಂಖ್ಯೆಯಲ್ಲಿ ಬಂದು ಸೇರಿದ್ದರು. ಹುಝೂರ್ ಜಮಅದೊಂದಿಗೆ ಅಸರ್ ನಮಾಝ್ ಸಹ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

### ಕೌಟುಂಬಿಕ ಭೇಟಿಗಳು

ಕಾರ್ಯಕ್ರಮದನ್ವಯ 6 ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಮಿಸಿದರು ಹಾಗೂ ಕಾರ್ಯಕ್ರಮದಂತೆ ಕೌಟುಂಬಿಕ ಭೇಟಿಗಳು ಪ್ರಾರಂಭವಾದವು. ಇಂದು ಸಂಜೆಯ ಈ ಅಧಿವೇಶನದಲ್ಲಿ 19 ಕುಟುಂಬಗಳ 81 ಜನರು ಹುಝೂರರೊಂದಿಗೆ ಭೇಟಿಯಾಗುವ ಭಾಗ್ಯ ಪಡೆದರು. ಈ ಜಮಾಅತ್ ಬಾಂಧವರು ಮತ್ತು ಕುಟುಂಬಗಳು ಮಹದಿಯಾಬಾದ್ ಅಲ್ಲದೇ

*(ಉಳಿದ ವರದಿ ಪುಟ ಸಂಖೆ 08 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.